ಸಂಪುಟ: 06 ಸಂಚಿಕೆ: 77 ಪುಟಗಳು: 08 ಭಾನುವಾರ 31 ಮೇ 2026
www.udayavahini.in epaper.udayavahini.in Udaya vahini news Udaya vahini news Udayavahini news youGÓ...qbe udayavahininews@gmail.
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಸರಿ ಮತ್ತು ಸುಲಭಗಳ ಮಧ್ಯೆ ಆಯ್ಕೆಕಷ್ಟ. ಸರಿಯಿದ್ದದ್ದು ಸುಲಭವೆನ್ನಲಾಗದು, ಸುಲಭವಿದ್ದದ್ದೆಲ್ಲ ಸರಿಯಿರಲಾರದು ನಮ್ಮ ಆಯ್ಕೆ ಸರಿಯಿರಲಿ!

ಉದಯ UV ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಸಿದ್ದರಾಮಯ್ಯನವರೇ ರಾಷ್ಟ್ರ ರಾಜಕಾರಣಕ್ಕೆ ಬನ್ನಿ: ಕೆ.ಸಿ.ವೇಣುಗೋಪಾಲ್ ಮತ್ತೆ ಆಹ್ವಾನ

• **ಉದಯವಾಹಿನಿ, ಬೆಂಗಳೂರು**

ಸಿದ್ದರಾಮಯ್ಯನವರೇ ನೀವು ರಾಷ್ಟ್ರ ರಾಜಕಾರಣಕ್ಕೆ ಬನ್ನಿ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತೆ ಆಹ್ವಾನ ನೀಡಿದರು. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ ಅವರನ್ನು ರಾಷ್ಟ್ರ ರಾಜಕಾರಣಕ್ಕೆ ಕೆ.ಸಿ.ವೇಣುಗೋಪಾಲ್ ಆಹ್ವಾನಿಸಿದರು. ನಿಮ್ಮ ಸೇವೆ ರಾಷ್ಟ್ರಕ್ಕೂ ಬೇಕು. ರಾಷ್ಟ್ರ ಮಟ್ಟಕ್ಕೂ ನೀವು ಬೇಕು ಎಂದು ಸಿಎಲ್‌ಪಿ ಸಭೆಯಲ್ಲಿ ಶಾಸಕರ ಎದುರೇ ವೇಣುಗೋಪಾಲ್ ಪ್ರಸ್ತಾಪ ಇಟ್ಟರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದ್ದ ಸಿದ್ದರಾಮಯ್ಯ ಅವರು ಸಭೆಯಲ್ಲಿ ಶಾಸಕರಿಗೆ ಧನ್ಯವಾದ ತಿಳಿಸಿದರು. ಜನರಿಗೆ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ, ಮುಂದುವರಿಸುತ್ತೇವೆ ಎಂದು ಶಾಸಕರಿಗೆ ಹೇಳಿದರು. ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಅನ್ಯಾಯ ಮಾಡಿದೆ. ಆದರೂ ಉತ್ತಮ ಆಡಳಿತ ನೀಡಿದ್ದೇವೆ. ಗ್ಯಾರಂಟಿಗಳನ್ನ ಯಶಸ್ವಿಯಾಗಿ ಜನರಿಗೆ ತಲುಪಿಸಿದ್ದೇವೆ. ಉತ್ತಮ ಆಡಳಿತ ನೀಡಿದ ಪರಿಣಾಮ ನಾವು ಚುನಾವಣೆ ಗೆಲ್ಲುವಂತಾಯ್ತು. ಬೈಎಲೆಕ್ಷನ್ ಸೇರಿದಂತೆ ಹಲವು ಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದೇವೆ.

## ಬೆಲೆ ಏರಿಕೆ ಎಫೆಕ್ಟ್: ಬೆಂಗಳೂರಲ್ಲಿ ಮತ್ತೆ ಕಸದ ಸಮಸ್ಯೆ ಉಲ್ಬಣ ಸಾಧ್ಯತೆ

• **ಉದಯವಾಹಿನಿ, ಬೆಂಗಳೂರು**

ಪದೇ ಪದೇ ಏರಿಕೆಯಾಗುತ್ತಿರುವ ತೈಲ ಬೆಲೆ ಕಸ ವಿಲೇವಾರಿಯ ಮೇಲೂ ಪರಿಣಾಮ ಬೀರುವ ಸಾಧ್ಯತೆಗಳು ಗೋಚರಿಸುತ್ತಿವೆ. ಡೀಸೆಲ್ ಹಾಗೂ ಪೆಟ್ರೋಲ್ ದರ ಏರಿಕೆ, ಕನಿಷ್ಠ ವೇತನ ಹೆಚ್ಚಳ ಮತ್ತು ಬಾಕಿ ಪಾವತಿಗಳ ಸಮಸ್ಯೆಯಿಂದಾಗಿ ನಗರದಾದ್ಯಂತ ತ್ಯಾಜ್ಯ ಸಂಗ್ರಹ ಸೇವೆಗಳನ್ನು ಯಾವುದೇ ಸಮಯದಲ್ಲಿ ಸ್ಥಗಿತಗೊಳಿಸುವ ಪರಿಸ್ಥಿತಿ ಎದುರಾಗಿದೆ ಎಂದು ಕಸ ಗುತ್ತಿಗೆದಾರರ ಸಂಘ ತಿಳಿಸಿದೆ. ನಮ ಸಮಸ್ಯೆ ಬಗ್ಗೆ ಘನತ್ಯಾಜ್ಯ ಘಟಕದ ಮುಖ್ಯಸ್ಥರಿಗೆ ಹಾಗೂ ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದೇವೆ. ಕಸ ಸಂಗ್ರಹಣೆ, ಸಾಗಾಣಿಕೆ ಮತ್ತು ವಿಲೇವಾರಿ ಗುತ್ತಿಗೆದಾರರ ಸಂಘದ ತುರ್ತು ಸಭೆ ಕರೆಯುವಂತೆ ಮನವಿ ಮಾಡಿದ್ದೇವೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಬಾಲ ಸುಬ್ರಮಣ್ಯ ತಿಳಿಸಿದ್ದಾರೆ.

ಡೀಸೆಲ್ ದರ, ಕೂಲಿ ವೆಚ್ಚ, ವಾಹನ ನಿರ್ವಹಣಾ ಖರ್ಚು ಹಾಗೂ ಟ್ರಾಕ್ಟರ್ ಮತ್ತು ಆಟೋ ಟಿಪ್ಪರ್ ವೆಚ್ಚಗಳು ನಿರಂತರವಾಗಿ ಏರಿಕೆಯಾಗುತ್ತಿವೆ. ಈ ಪರಿಸ್ಥಿತಿಯಲ್ಲಿ ಹಾಲಿ ದರದಲ್ಲಿ ಸೇವೆ ಮುಂದುವರಿಸುವುದು ಅಸಾಧ್ಯವಾಗಿದೆ ಎಂದು ಅವರು ಹೇಳಿದ್ದಾರೆ.

2017-18ರಲ್ಲಿ ಆಟೋ ಟಿಪ್ಪರ್ ದರ ನಿಗದಿಪಡಿಸಿದ ವೇಳೆ ಡೀಸೆಲ್ ದರ ಲೀಟರ್‌ಗೆ 68 ರೂ. ಇತ್ತು. ಆದರೆ ಪ್ರಸ್ತುತ ದರವು ಸುಮಾರು 26 ರೂಗಳಿಗಿಂತ ಹೆಚ್ಚು ಏರಿಕೆಯಾಗಿದೆ. ಆದ್ದರಿಂದ ಇಂಧನ ವೆಚ್ಚದ ಪ್ರಸ್ತುತ ಮಾನದಂಡಕ್ಕೆ ಅನುಗುಣವಾಗಿ ಹೊಸ ದರಪಟ್ಟಿ ನಿಗದಿಪಡಿಸಬೇಕು ಎಂದು ಗುತ್ತಿಗೆದಾರರು ಒತ್ತಾಯಿಸಿದ್ದಾರೆ.

## ಜನಾರ್ದನ ರೆಡ್ಡಿಗೆ ಬಿಗ್ ರಿಲೀಫ್: ಅಕ್ರಮ ಅದಿರು ಸಾಗಾಟದ ಎರಡು ಕೇಸ್ ಕೈಬಿಟ್ಟ ಕೋರ್ಟ್

• **ಉದಯವಾಹಿನಿ, ಬೆಂಗಳೂರು**

ಅಕ್ರಮ ಅದಿರು ಸಾಗಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿಗೆ ದೊಡ್ಡ ರಿಲೀಫ್ ಸಿಕ್ಕಿದೆ. ಲೋಕಾಯುಕ್ತ ಎಸ್‌ಐಟಿ ದಾಖಲಿಸಿದ್ದ ಎರಡು ಪ್ರಮುಖ ಪ್ರಕರಣಗಳಲ್ಲಿ ಜನಾರ್ದನ ರೆಡ್ಡಿ ಸೇರಿದಂತೆ ಹಲವರನ್ನು ಕೈಬಿಟ್ಟು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ. ಮಾಜಿ ಸಚಿವ, ಗಂಗಾವತಿ ಕ್ಷೇತ್ರದ ಶಾಸಕ ಗಾಲಿ ಜನಾರ್ದನ ರೆಡ್ಡಿ ವಿರುದ್ಧದ ಅಕ್ರಮ ಅದಿರು ಸಾಗಾಟ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ಲೋಕಾಯುಕ್ತ ವಿಶೇಷ ತನಿಖಾ ದಳ ದಾಖಲಿಸಿದ್ದ ಎರಡು ಪ್ರಮುಖ ಕೇಸ್‌ಗಳಲ್ಲಿ ಜನಾರ್ದನ ರೆಡ್ಡಿಗೆ ರಿಲೀಫ್ ಸಿಕ್ಕಿದೆ. ಪ್ರಕರಣದಿಂದ ತಮ್ಮನ್ನು ಮುಕ್ತಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ಮಾಡಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಜನಾರ್ದನ ರೆಡ್ಡಿ ಸೇರಿದಂತೆ ಇತರ ಆರೋಪಿಗಳನ್ನು ಪ್ರಕರಣದಿಂದ ಕೈಬಿಟ್ಟು ಮಹತ್ವದ ಆದೇಶ ಹೊರಡಿಸಿದೆ.

## ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ರ ಫಲಿತಾಂಶ ಪ್ರಕಟ

• **ಉದಯವಾಹಿನಿ, ಬೆಂಗಳೂರು**

ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ರ ಫಲಿತಾಂಶ ಪ್ರಕಟವಾಗಿದ್ದು, ಪರೀಕ್ಷೆ ಬರೆದಿದ್ದ 49,351 ವಿದ್ಯಾರ್ಥಿಗಳ ಪೈಕಿ 31,080 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.62 ಫಲಿತಾಂಶ ದಾಖಲಾಗಿದೆ. ಮೇ 18ರಿಂದ 25ರ ವರೆಗೆ 358 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ-2ನ್ನು ನಡೆಸಲಾಗಿತ್ತು. ವಿಶೇಷ ಅಂದರೆ ಪರೀಕ್ಷೆ-2ರಲ್ಲಿ ಬರೋಬ್ಬರಿ 8,385 ಶಾಲಾ ವಿದ್ಯಾರ್ಥಿಗಳು ತಮ್ಮ ಫಲಿತಾಂಶವನ್ನು ಯಶಸ್ವಿಯಾಗಿ ಉತ್ತಮಪಡಿಸಿಕೊಂಡಿದ್ದಾರೆ.

2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಫಲಿತಾಂಶ ಏಪ್ರಿಲ್ 23ರಂದು ಪ್ರಕಟವಾಗಿದ್ದು, ಶೇ 94.1ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ 7,70,209 ವಿದ್ಯಾರ್ಥಿಗಳ ಪೈಕಿ 7,24,794 ಮಕ್ಕಳು ಪಾಸ್‌ಆಗಿದ್ದರು. ಶೇ 96.18ರಷ್ಟು ಬಾಲಕಿಯರು, ಶೇ 91.94ರಷ್ಟು ಬಾಲಕರು ಉತ್ತೀರ್ಣರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡಾ 98.40ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಫಲಿತಾಂಶದಲ್ಲಿ ಮೊದಲ ಸ್ಥಾನ ಪಡೆದಿತ್ತು. ಉಡುಪಿ ಜಿಲ್ಲೆ ಶೇ 98.18 ರ ಫಲಿತಾಂಶದೊಂದಿಗೆ 2ನೇ ಸ್ಥಾನ, ಉತ್ತರ ಕನ್ನಡ 3ನೇ ಸ್ಥಾನ (ಶೇ 98.09) ಮತ್ತು ಹಾಸನ 4ನೇ ಸ್ಥಾನ (ಶೇ 97.51) ಗಳಿಸಿದ್ದವು.

# ರಾಜೀನಾಮೆ ಬಳಿಕವೂ ಸಿದ್ದರಾಮಯ್ಯ ನಿವಾಸದ ಮುಂದೆ ಜನಜಂಗುಳಿ, ತಗ್ಗದ ಜನಪ್ರಿಯತೆ

• **ಉದಯವಾಹಿನಿ, ಬೆಂಗಳೂರು**



ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಮಾಜಿಯಾದ ಬಳಿಕವೂ ಮನೆಯ ಮುಂದೆ ಜನಜಂಗುಳಿ, ಅಹವಾಲು ಸಲ್ಲಿಕೆ ನಿಂತಿಲ್ಲ. ಸಾಮಾನ್ಯವಾಗಿ ಮಾಜಿಯಾದವರ ಮನೆಯ ಮುಂದೆ ನಾಯಕರ ಸಂಖ್ಯೆ ಕಡಿಮೆ ಇರುತ್ತದೆ. ಆದರೆ ಸಿದ್ದರಾಮಯ್ಯ ಅವರ ಮನೆಯಲ್ಲಿ ಇಂದು ಕೂಡ ಜನಜಂಗುಳಿ ನೆರೆದಿತ್ತು. ಸಚಿವ ಸಂಪುಟದಲ್ಲಿ ಅವಕಾಶ ಗಿಟ್ಟಿಸಲು ಶಾಸಕರು, ವಿಧಾನ ಪರಿಷತ್ ಸದಸ್ಯರು, ವಿಧಾನ ಪರಿಷತ್, ರಾಜ್ಯಸಭೆ ಚುನಾವಣೆಗಳಲ್ಲಿ ಅವಕಾಶ ಗಿಟ್ಟಿಸುವ ಆಕಾಂಕ್ಷಿಗಳು, ನಿಗಮ ಮಂಡಳಿಗಳಲ್ಲಿ ಹುದ್ದೆ ಪಡೆಯಲು ಕಾರ್ಯಕರ್ತರು ಹಾಗೂ ಎರಡನೇ ಸಾಲಿನ ನಾಯಕರು ನಿರಂತರವಾಗಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡುತ್ತಲೇ ಇದ್ದಾರೆ. ಪದತ್ಯಾಗ ಮಾಡಿದ ಬಳಿಕವೂ ಸಿದ್ದರಾಮಯ್ಯ ಹೈಕಮಾಂಡ್ ಮಟ್ಟದಲ್ಲಿ ಪ್ರಭಾವಿಯಾಗಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಅವರನ್ನು ದೆಹಲಿಯಲ್ಲಿ ಆತ್ಮೀಯವಾಗಿ ಸಂಬಂಧಿಸಿ ಕಳುಹಿಸಿದ್ದರು. ಹೀಗಾಗಿ ಸಿದ್ದರಾಮಯ್ಯ ಅವರ ಪಾತ್ರ ಹೊಸ ಸರ್ಕಾರದಲ್ಲೂ ಪ್ರಮುಖವಾಗಿರಬಹುದು ಎಂದು ಭಾವಿಸಿ ನಾಯಕರು ಎಡತಾಕುತ್ತಲೇ ಇದ್ದಾರೆ. ಅನೇಕ ಶಾಸಕರು ಇಂದು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಸಂಪುಟದಲ್ಲಿ ತಮಗೂ ಅವಕಾಶ ಕೊಡಿಸುವಂತೆ ಮನವಿ ಮಾಡಿದ್ದಾರೆ.

### ಜನ ದುಂಬಾಲು

ಮನೆ ಮುಂದಿನ ಜನರನ್ನು ಭೇಟಿ ಮಾಡಿದ ಸಿದ್ದರಾಮಯ್ಯ ಸಾವಧಾನದಿಂದ ಅಹವಾಲು ಆಲಿಸಿದರು. ಅರ್ಜಿ ಸ್ವೀಕರಿಸಿದರು. ಮುಖ್ಯಮಂತ್ರಿಯಾಗಿದ್ದಾಗ ಕಾರ್ಯದೊತ್ತಡದಲ್ಲಿ ಲಗುಬಗೆಯಿಂದ ಅರ್ಜಿ ಪಡೆದು ಆಪ್ತ ಕಾರ್ಯದರ್ಶಿಗಳ ಕೈಗೆ ಕೊಡುತ್ತಿದ್ದ ಸಿದ್ದರಾಮಯ್ಯ, ಇಂದು ಕೆಲವರ ಅರ್ಜಿಗಳನ್ನು ಪಡೆದು ಓದಿದರು. ಇನ್ನೂ ಕೆಲ ಗಂಭೀರ ಸಮಸ್ಯೆಗಳ ಅರ್ಜಿದಾರರಿಗೆ ನಾನು ಈಗ ಮುಖ್ಯಮಂತ್ರಿ ಅಲ್ಲ. ರಾಜೀನಾಮೆ ನೀಡಿದ್ದೇನೆ. ಹೊಸ ಮುಖ್ಯಮಂತ್ರಿ ಬರುವವರೆಗೂ ಹಂಗಾಮಿಯಾಗಿರುತ್ತೇನಷ್ಟೆ. ನೀವು ಹೊಸ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಎಂದು ಸಲಹೆ ನೀಡಿದರು.

# ಡಿಕೆಶಿ ಸಂಭ್ರಮ ಜೋರು ಕೈ ಶಾಸಕರು ಗೈರು



## ಕೈ ನೂತನ ಶಾಸಕಾಂಗ ಪಕ್ಷದ ನಾಯಕರಾಗಿ ಸರ್ವಾನುಮತದೊಂದಿಗೆ ಡಿಕೆಶಿ ಆಯ್ಕೆ

## ರಾಜ್ಯಪಾಲರ ಬಳಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ಡಿಕೆ ಶಿವಕುಮಾರ್

### ಕೆ.ಸಿ.ವೇಣುಗೋಪಾಲ್ ಹೇಳಿಕೆ

ಮುಂದಿನ ಶಾಸಕಾಂಗ ಪಕ್ಷದ ನಾಯಕನ ಕುರಿತಂತೆ ಹೈಕಮಾಂಡ್ ಮಟ್ಟದಲ್ಲಿ ನಡೆದ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಅವರನ್ನ ಅವಿರೋಧವಾಗಿ ಸಿಎಲ್‌ಪಿ ನಾಯಕರಾಗಿ ಆಯ್ಕೆ ಮಾಡಲಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶಾಸಕಾಂಗ ಪಕ್ಷದ ನಾಯಕನಾಗಿ ಅವಿರೋಧ ಆಯ್ಕೆ ಬಳಿಕ ಹೊರ ಬಂದು ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ನೀಡಿದ ರಾಜೀನಾಮೆ ಅಂಗೀಕಾರವಾಗಿದೆ. ನೂತನ ನಾಯಕನಾಗಿ ಸಭೆಯಲ್ಲಿ ಸರ್ವಾನುಮತದಿಂದ ಡಿ.ಕೆ.ಶಿವಕುಮಾರ್ ಅವರನ್ನ ಆಯ್ಕೆ ಮಾಡಲಾಗಿದೆ. ಕಾಂಗ್ರೆಸ್ ಹೈಕಮಾಂಡ್ ಡಿಕೆಶಿ ಅವರ ಹೆಸರನ್ನ ಸೂಚಿಸಿತ್ತು.

**ಜೂನ್ 3ರ ಸಂಜೆ ನೂತನ ಸಿಎಂ ಪ್ರಮಾಣ ವಚನ ಸ್ವೀಕಾರ**



**ಆಡಂಬರದ ಕಾರ್ಯಕ್ರಮಕ್ಕೆ ಬ್ರೇಕ್?**

• **ಉದಯವಾಹಿನಿ, ಬೆಂಗಳೂರು**

ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ. ಶಿವಕುಮಾರ್ ಅವರು ಸರ್ವಾನುಮತದಿಂದ ಆಯ್ಕೆ ಆಗಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ನಡೆದ ಸಭೆಯಲ್ಲಿ ನೂತನ ಆಯ್ಕೆ ನಡೆಯಿತು. ಹೊಸ ಶಾಸಕಾಂಗ ಪಕ್ಷದ ನಾಯಕರಾಗಿ ಡಿ ಕೆ ಶಿವಕುಮಾರ್ ಅವರ ಹೆಸರನ್ನು ಸಿಎಂ ಸಿದ್ದರಾಮಯ್ಯ ಅವರು ಸೂಚಿಸಿದರು. ಡಾ. ಜಿ ಪರಮೇಶ್ವರ್ ಅವರು ಅನುಮೋದಿಸಿದರು. ಇದನ್ನು ಸಭೆಯು ಒಕ್ಕೊರಲಿನಿಂದಬೆಂಬಲಿಸಿತು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ.ಶಿವಕುಮಾರ್ ಆಯ್ಕೆಯಾಗಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಘೋಷಿಸಿದರು. ಇದಕ್ಕೂ ಮೊದಲು ಸಭೆಯ ಆರಂಭದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆ ಪ್ರಕ್ರಿಯೆಯು ಸಿಎಂ ಸಿದ್ದರಾಮಯ್ಯ ಅವರ ಪ್ರಸ್ತಾವನೆಯೊಂದಿಗೆ ನಡೆಯಲಿದೆ ಎಂದು ಎಐಸಿಸಿ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಪ್ರಕಟಿಸಿ, ಚಾಲನೆ ನೀಡಿದರು.

ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆ ವಿಚಾರವನ್ನು ಎಐಸಿಸಿ ವಿವೇಚನೆಗೆ ಬಿಡಲಾಗಿದೆ ಎಂಬ ಒಂದು ಸಾಲಿನ ನಿರ್ಣಯವನ್ನು ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದರು. ಪರಮೇಶ್ವರ್ ಅವರು ಅನುಮೋದಿಸಿದರು. ಬಳಿಕ ಎಲ್ಲಾ ಶಾಸಕರು ಕೈ ಎತ್ತುವ ಮೂಲಕ ಇದನ್ನು ಬೆಂಬಲಿಸಿದರು. ನಂತರ 10 ನಿಮಿಷಗಳ ವಿರಾಮ ನೀಡಲಾಗಿದೆ ಎಂದು ಸುರ್ಜೇವಾಲ ಹೇಳಿದರು. ಸಿಎಂ ಸಿದ್ದರಾಮಯ್ಯ, ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರು ಸಿಎಂ ಕೊಠಡಿಗೆ ತೆರಳಿದರು. ಅಲ್ಲಿಂದ ಸಮ್ಮೇಳನ ಸಭಾಂಗಣಕ್ಕೆ ಮೂವರು ವಾಪಸ್ ಬಂದ ನಂತರ ಶಾಸಕಾಂಗ ಪಕ್ಷದ ನೂತನ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿತು.

ನಂತರ ನೂತನ ನಾಯಕ ಡಿ.ಕೆ.ಶಿವಕುಮಾರ್ ಅವರು ನಿರ್ಗಮಿತ ನಾಯಕ ಸಿದ್ದರಾಮಯ್ಯ ಅವರ ಮುಖ್ಯಮಂತ್ರಿ ಅವಧಿಯ ಸೇವೆಯನ್ನು ಕೊಂಡಾಡುವ ನಿರ್ಣಯ ಮಂಡಿಸಿ, ಸಭೆಯ ಬೆಂಬಲ ಕೋರಿದರು. ಸಭೆ ಒಕ್ಕೊರಲಿನಿಂದ ಬೆಂಬಲಿಸಿತು. ಕರ್ನಾಟಕದ ಜನತೆಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ನೀಡಿರುವ ವಿಶಿಷ್ಟ ಸೇವೆಯನ್ನು ಸ್ಮರಿಸಿ, ಕಾಂಗ್ರೆಸ್ ಶಾಸಕಾಂಗ ಪಕ್ಷವು ಸಿದ್ದರಾಮಯ್ಯ ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತದೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ನಡೆದ ಸಭೆಯಲ್ಲಿ ಹಾಜರಿದ್ದ ಶಾಸಕರು ಹಾಗೂ ಮುಖಂಡರು. ಅವರು 2013-2018 ಮತ್ತು 2023-2026 ರವರೆಗೆ ಮುಖ್ಯಮಂತ್ರಿಯಾಗಿ ಹಾಗೂ ಎರಡು ಅವಧಿಗಳಲ್ಲಿ ಪ್ರತಿಪಕ್ಷದ ನಾಯಕರಾಗಿ ಸಲ್ಲಿಸಿದ ಸೇವೆಯನ್ನು ಜನತೆ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಯಾವಾಗಲೂ ಅಪಾರ ಪ್ರೀತಿ ಹಾಗೂ ಹೆಮ್ಮೆಯಿಂದ ಸ್ಮರಿಸುತ್ತಾರೆ.

ಸಾಮಾಜಿಕ ನ್ಯಾಯದ ಮೇಲಿನ ಅವರ ಸಮರ್ಪಣಾ ಭಾವ, ಆಡಳಿತಾತ್ಮಕ ಸಾಮರ್ಥ್ಯ, ಪಕ್ಷದ ಸಿದ್ಧಾಂತಕ್ಕೆ ಅವರ ಬದ್ಧತೆ ಮತ್ತು ಪಕ್ಷದ ನಾಯಕತ್ವದಲ್ಲಿನ ಅವರ ಸಂಪೂರ್ಣ ನಂಬಿಕೆಯು ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಅನುಕರಿಸಬೇಕಾದ ಮಾದರಿಯಾಗಿದೆ. ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರವು ಯಾವಾಗಲೂ ಇದೇ ಆದರ್ಶಗಳ ಹಾದಿಯಲ್ಲಿ ಮುನ್ನಡೆಯುತ್ತದೆ. ನಾವು ಅವರಿಗೆ ನಮ್ಮ ಹೃದಯದಾಳದಿಂದ ಧನ್ಯವಾದಗಳನ್ನು ಅರ್ಪಿಸುತ್ತೇವೆ.

### ಸರಳ ಪ್ರಮಾಣ ವಚನಕ್ಕೆ ಸಿದ್ಧತೆ

ಆರಂಭದಲ್ಲಿ ಕಂಠೀರವ ಕ್ರೀಡಾಂಗಣದಲ್ಲಿ ಬೃಹತ್ ಪ್ರಮಾಣದ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ ಬುಧವಾರ ಕಾರ್ಯದಿನವಾಗಿರುವುದರಿಂದ ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗುವ ಸಾಧ್ಯತೆಯನ್ನು ಪರಿಗಣಿಸಿ, ಸರಳವಾಗಿ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿದೆ ಎನ್ನಲಾಗಿದೆ. ವಿಧಾನಸೌಧದ ಮೆಟ್ಟಿಲುಗಳ ಬಳಿ ಅಥವಾ ಲೋಕಭವನದಲ್ಲಿ ಪ್ರಮಾಣ ವಚನ ಸಮಾರಂಭ ನಡೆಯುವ ಸಾಧ್ಯತೆ ಇದ್ದು, ಸುಮಾರು 1,000 ಮಂದಿಗೆ ಮಾತ್ರ ಪ್ರವೇಶಾವಕಾಶ ಕಲ್ಪಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

**ಸಿದ್ದರಾಮಯ್ಯಗೆ ಧನ್ಯವಾದ ಸಲ್ಲಿಕೆ**



### ಶಾಸಕಾಂಗ ಸಭೆಗೆ ಗೈರಾದ ಶಾಸಕರು

ಯು.ಟಿ ಖಾದರ್ - ಸ್ಪೀಕರ್ (ಬರುವಂತಿಲ್ಲ)
ರಾಜು ಕಾಗೆ (ಅನಾರೋಗ್ಯ)
ಕೆ.ವೆಂಕಟೇಶ್ (ತಂದೆಯವರ ಸಾವಿನ ಕಾರಣದಿಂದ) ರಹೀಂಖಾನ್ (ಹಜ್ ಯಾತ್ರೆ)
ಜಿ.ಟಿ.ಪಾಟೀಲ್ (ಅನಿವಾರ್ಯ ಕಾರಣ

**ಪಕ್ಷದ ನಿರ್ಧಾರಕ್ಕೆ ಬೆಂಬಲ ಎಂದ ಶಾಸಕರು**

ಸಭೆಯ ಆರಂಭದಲ್ಲಿ ಸಿದ್ದರಾಮಯ್ಯ ಅವರು ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಹೇಳಿದರು. ಆ ಬಳಿಕ ಶಾಸಕರು ಪಕ್ಷದ ನಿರ್ಣಯಕ್ಕೆ ನಮ್ಮ ಒಮ್ಮತವಿದೆ ಎಂದು ಹೇಳಿದರು. ಆ ಬಳಿಕ ಕಾಂಗ್ರೆಸ್ ಹೈಕಮಾಂಡ್ ನೂತನ ನಾಯಕನಾಗಿ ಡಿಕೆ ಶಿವಕುಮಾರ್ ಹೆಸರು ಪ್ರಸ್ತಾಪಿಸಲಾಗಿದೆ.

ಔಪಚಾರಿಕವಾಗಿ ಡಾ ಜಿ ಪರಮೇಶ್ವರ್ ಅವರು ಅನುಮೋದನೆ ನೀಡಿದರು. ಈ ಮೂಲಕ ಎಲ್ಲಾ ಶಾಸಕರು ಪಕ್ಷ ಹೇಳಿದವರಿಗೆ ನಮ್ಮ ಬೆಂಬಲ ಎಂದರು. ಡಿಕೆಶಿ ಆಯ್ಕೆಗೆ ಒಪ್ಪಿಗೆ ಸಿಕ್ಕಿತು.

**ಸಿಎಂ ಪ್ರಮಾಣ ವಚನಕ್ಕೆ ದಿನಾಂಕ ಫಿಕ್ಸ್**

ಇನ್ನೊಂದೆಡೆ ಕರ್ನಾಟಕ ನೂತನ ಸಿಎಂ ಆಗಿ ಡಿಕೆ ಶಿವಕುಮಾರ್ ಪ್ರಮಾಣ ವಚನಕ್ಕೆ ದಿನಾಂಕ ನಿಗದಿಯಾಗಿದೆ. ಜೂನ್ 3, ಬುಧವಾರ ಸಂಜೆ 4.05 ಕ್ಕೆ ಬೆಂಗಳೂರಿನ ಲೋಕಭವನದ ಗಾಜಿನ ಮನೆಯಲ್ಲಿ ಕಾರ್ಯಕ್ರಮ ನಡೆಯಲಿದೆ.

### ಡಿಕೆ..ಡಿಕೆ ಜಯಘೋಷ ತಣ್ಣಗಾದ ಸಿದ್ದು

ಸಿಎಲ್‌ಪಿ ಸಭೆ ಬಳಿಕ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಹೊರಬಂದ ವೇಳೆ ವಿಧಾನಸೌಧದ ಬಳಿ ಡಿಕೆ ಬೆಂಬಲಿಗರು 'ಡಿಕೆಡಿಕೆ' ಜಯಘೋಷ ಕೂಗುವ ಮೂಲಕ ಅಬ್ಬರಿಸಿದ್ದಾರೆ. ಸಿಎಲ್‌ಪಿ ಸಭೆ ಬಳಿಕ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಒಂದೇ ಕಾರಿನಲ್ಲಿ ಲೋಕಭವನಕ್ಕೆ ತೆರಳಿದ್ದಾರೆ. ಲೋಕಭವನಕ್ಕೆ ತೆರಳುವಾಗ ವಿಧಾನಸೌಧದ ಉತ್ತರ ಗೇಟ್‌ನಲ್ಲಿ ಡಿಕೆ ಬೆಂಬಲಿಗರು ಭರ್ಜರಿ ಜಯಘೋಷ ಕೂಗಿದ್ದಾರೆ. ಮುಂದಿನ ಮುಖ್ಯಮಂತ್ರಿ ಡಿಕೆ ಎಂದು ಜೈಕಾರ ಹಾಕಿದ್ದಾರೆ. ಸಿದ್ದರಾಮಯ್ಯರ ಮುಂದೆಯೇ ಡಿಕೆ ಬೆಂಗಲಿಗರು ಜೈಕಾರ ಕೂಗಿದ್ದಾರೆ. ಈ ವೇಳೆ ಸಿದ್ದರಾಮಯ್ಯ ಮೌನವಾಗಿ ಕುಳಿತಿದ್ದರು. ಸದ್ಯ ಲೋಕಸಭೆಗೆ ತೆರಳಿರುವ ಡಿಕೆ ಶಿವಕುಮಾರ್ ರಾಜ್ಯಪಾಲರನ್ನು ಭೇಟಿಯಾಗಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ಶಾಸಕಾಂಗ ಪಕ್ಷದ ನಾಯಕನಾಗಿ ಡಿ.ಕೆ.ಶಿವಕುಮಾರ್ ಆಯ್ಕೆಯಾಗಿದ್ದಾರೆ. ವಿಧಾನಸೌಧದಲ್ಲಿ ನಡೆದ ಸಿಎಲ್‌ಪಿ ಸಭೆಯಲ್ಲಿ ಸಿದ್ದರಾಮಯ್ಯ ಆರಂಭಿಕ ಮಾತುಗಳನ್ನಾಡಿದರು. ಈ ವೇಳೆ ನಿರ್ಣಯ ಮಂಡಿಸಿದರು. ಸಿಎಲ್‌ಪಿ ನಾಯಕನಾಗಿ ಡಿಕೆಶಿ ಹೆಸರನ್ನು ಸಿದ್ದರಾಮಯ್ಯ ಅವರು ಪ್ರಸ್ತಾಪಿಸಿದರು.

## ಅತ್ಯಾಚಾರ, ಬಲವಂತದ ಮತಾಂತರ ಆರೋಪ: ಆರೋಪಿಯ ತಾಯಿಗೆ ನಿರೀಕ್ಷಣಾ ಜಾಮೀನು ನೀಡಿದ ಹೈಕೋರ್ಟ್

• **ಉದಯವಾಹಿನಿ, ಬೆಂಗಳೂರು**


ಅತ್ಯಾಚಾರ ಮತ್ತು ಬಲವಂತದ ಮತಾಂತರ ಆರೋಪದಲ್ಲಿ ಪ್ರಮುಖ ಆರೋಪಿಯೊಬ್ಬರ ತಾಯಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಆರೋಪಿಯ ತಾಯಿಯು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ನಟರಾಜ್ ಅವರಿದ್ದ ರಜಾಕಾಲೀನ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಅಲ್ಲದೇ, ಅರ್ಜಿದಾರರು ಕೇವಲ ಮೊದಲ ಆರೋಪಿಯ ತಾಯಿಯಾಗಿದ್ದು, ಅಪರಾಧ ಕೃತ್ಯದಲ್ಲಿ ಇವರ ನೇರ ಪಾತ್ರ ಕಂಡುಬಂದಿಲ್ಲ. ಅರ್ಜಿದಾರರ ವಿರುದ್ಧದ ಆರೋಪಗಳು ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಯ ವ್ಯಾಪ್ತಿಗೆ ಬರುವುದಿಲ್ಲ. ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 64ರ ಅಡಿ ಅತ್ಯಾಚಾರ ಪ್ರಕರಣದಲ್ಲಿ ತಾಯಿಯ ಪಾತ್ರ ಸದ್ಯಕ್ಕೆ ದೂರದ ಸಂಗತಿಯಾಗಿದೆ. ಹೀಗಾಗಿ, ಆರೋಪಗಳು ಗಂಭೀರ ಎಂದು ತಿಳಿದು ಆಕೆಗೆ ನಿರೀಕ್ಷಣಾ ಜಾಮೀನು ನಿರಾಕರಿಸಲಾಗದು ಎಂದು ಪೀಠ ತಿಳಿಸಿದೆ.

**ಷರತ್ತುಗಳು :** ಅರ್ಜಿದಾರರನ್ನು ಬಂಧಿಸಿದರೆ 2 ಲಕ್ಷ ರೂ.ಗಳ ವೈಯಕ್ತಿಕ ಬಾಂಡ್, ಒಬ್ಬರ ಭದ್ರತಾ ಶ್ಯೂರಿಟಿ ಪಡೆದು ಬಿಡುಗಡೆ ಮಾಡಬೇಕು ಎಂದು ತನಿಖಾಧಿಕಾರಿಗಳಿಗೆ ಸೂಚಿಸಿರುವ ನ್ಯಾಯಪೀಠ, ಅರ್ಜಿದಾರರು ಆರೋಪಪಟ್ಟಿ ಸಲ್ಲಿಸುವವರೆಗೆ ಪ್ರತಿ ಶನಿವಾರ ಬೆಳಗ್ಗೆ 11 ಗಂಟೆಗೆ ತನಿಖಾಧಿಕಾರಿಯ ಮುಂದೆ ಹಾಜರಾಗಬೇಕು. ಇಂಥದ್ದೇ ಪ್ರಕರಣದಲ್ಲಿ ಭಾಗಿಯಾಗಬಾರದು, ಪ್ರಾಸಿಕ್ಯೂಷನ್ ಸಾಕ್ಷಿಯನ್ನು ತಿರುಚಬಾರದು ಎಂದು ಷರತ್ತುಗಳನ್ನು ವಿಧಿಸಿದೆ.

**ಪ್ರಕರಣದ ಹಿನ್ನೆಲೆ:** 2025ರ ಫೆಬ್ರವರಿಯಲ್ಲಿ ಮೊದಲ ಆರೋಪಿಯು ತನಗೆ ಮದ್ಯಸೇವನೆ ಮಾಡಿಸಿ, ಪ್ರಜ್ಞೆ ತಪ್ಪಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಆನಂತರ ತನ್ನ ಮೊಬೈಲ್‌ನಿಂದ ತನ್ನ ಬೆತ್ತಲೆ ಮತ್ತು ಆಕ್ಷೇಪರ್ಹವಾದ ಚಿತ್ರಗಳನ್ನು ತೆಗೆದಿದ್ದಾನೆ. ಇದನ್ನೇ ಇಟ್ಟುಕೊಂಡು ತನ್ನನ್ನು ಬ್ಲಾಕ್‌ಮೇಲ್ ಮಾಡಿ, ಪದೇ ಪದೇ ಲೈಂಗಿಕ ದೌರ್ಜನ್ಯ ನಡೆಸಿದ್ದರಿಂದ ಗರ್ಭ ಧರಿಸಿದ್ದೆ. ಈ ಸಂದರ್ಭದಲ್ಲಿ ದೈಹಿಕ ಹಲ್ಲೆ ನಡೆಸಿದ್ದರಿಂದ ನವಜಾತ ಶಿಶು ಮರಣ ಹೊಂದಿತ್ತು.ಮೊದಲನೇ ಆರೋಪಿಯು ತನ್ನನ್ನು ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರಗೊಂಡರೆ ಮಾತ್ರ ಮದುವೆಯಾಗುವುದಾಗಿ ಒತ್ತಾಯಿಸಿದ್ದು, 2025ರ ಜೂನ್ 22ರಂದು ಇಸ್ಲಾಂಗೆ ಮತಾಂತರಗೊಂಡು ಹೆಸರು ಬದಲಿಸಿಕೊಂಡು, ಆತನನ್ನು ಮದುವೆಯಾಗಿದ್ದೇನೆ ಎಂದು ದೂರಿದ್ದಾರೆ.

## ಅಕ್ರಮ ಮರಳು ದಂಧೆ ಮೇಲೆ ಲೋಕಾಯುಕ್ತ ದಾಳಿ, 17,000 ಮೆಟ್ರಿಕ್ ಟನ್ ಮರಳು, 52 ವಾಹನ ಜಪ್ತಿ

• **ಉದಯವಾಹಿನಿ, ಬೆಂಗಳೂರು:**



ಜಿಲ್ಲೆಯ ವಿವಿಧೆಡೆ ನಡೆಯುತ್ತಿದ್ದ ಅಕ್ರಮ ಮರಳು ಗಣಿಗಾರಿಕೆ, ಸಂಗ್ರಹಣೆ ಮತ್ತು ಸಾಗಾಣಿಕೆ ದಂಧೆಯ ವಿರುದ್ಧ ಕರ್ನಾಟಕ ಲೋಕಾಯುಕ್ತ ಇಲಾಖೆಯು ಶನಿವಾರ ಬೃಹತ್ ಕಾರ್ಯಾಚರಣೆ ನಡೆಸಿದ್ದಾರೆ. ದಾಳಿಯಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಮರಳು ಹಾಗೂ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ, ಸಾಗರ ಮತ್ತು ಹೊಸನಗರ ತಾಲೂಕುಗಳಲ್ಲಿ ಹರಿಯುವ ತುಂಗಭದ್ರಾ ಮತ್ತು ಶರಾವತಿ ನದಿ ಪಾತ್ರದ ಸ್ಥಳಗಳಲ್ಲಿ ವ್ಯಾಪಕವಾಗಿ ಅಕ್ರಮ ಮರಳು ದಂಧೆ ನಡೆಯುತ್ತಿರುವ ಕುರಿತು ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದರು. ಈ ಸಂಬಂಧ ಸ್ಥಳ ಪರಿಶೀಲನೆ ನಡೆಸಲು ಹಾಗೂ ಶಿವಮೊಗ್ಗದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿಗಳ ಕಚೇರಿಯ ದಾಖಲಾತಿಗಳನ್ನು ಪರಿಶೀಲಿಸುವಂತೆ ಲೋಕಾಯುಕ್ತರು ಆದೇಶಿಸಿದ್ದರು.

# ಸಿದ್ದು ನಿವಾಸದಲ್ಲಿ ರಾಜಕೀಯ ಚಟುವಟಿಕೆ ಸಚಿವ ಸ್ಥಾನಕ್ಕೆ ಶಾಸಕರ ಲಾಬಿ ಜೋರು

• **ಉದಯವಾಹಿನಿ ,ಬೆಂಗಳೂರು**

ಹೊಸ ಸರ್ಕಾರದಲ್ಲಿ ಸಚಿವ ಸ್ಥಾನ ಪಡೆಯಲು ಶಾಸಕರ ಲಾಬಿ ಶುರುವಾಗಿದೆ. ಹೈಕಮಾಂಡ್ ನಾಯಕರ ಬಳಿ ಕೆಲವರು ಲಾಬಿ ಮಾಡುತ್ತಿದ್ದರೇ, ಡಿಕೆಶಿ ಮನೆಗೂ ಹಲವರು ಭೇಟಿ ಕೊಡುತ್ತಿದ್ದಾರೆ. ಮತ್ತೊಂದು ಕಡೆ ಹಂಗಾಮಿ ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿ ಸಚಿವ ಸ್ಥಾನ ಕೊಡಿಸಿ ಅಂತ ದುಂಬಾಲು ಬಿದ್ದಿದ್ದಾರೆ.

ಕಾಂಗ್ರೆಸ್‌ನಲ್ಲಿ ಹೊಸ ಸರ್ಕಾರದ ರಚನೆ ಪ್ರಕ್ರಿಯೆಗಳು ಶುರುವಾಗಿದೆ. ಹೊಸ ಸರ್ಕಾರದಲ್ಲಿ ಮಂತ್ರಿ ಆಗಲು ಶಾಸಕರು ಲಾಬಿ ಶುರು ಮಾಡಿದ್ದಾರೆ. ಮಂತ್ರಿ ಪದವಿ ಪಡೆಯಲು ಅನೇಕ ಶಾಸಕರು ಹಂಗಾಮಿ ಸಿಎಂ ಸಿದ್ದರಾಮಯ್ಯ ಮನೆ ಬಾಗಿಲು ತಟ್ಟಿದ್ದಾರೆ.

ಹೌದು, ಹೇಗಾದರೂ ಮಾಡಿ ಡಿಕೆಶಿಯ ಹೊಸ ಸಂಪುಟ ಸೇರ್ಪಡೆ ಮಾಡಬೇಕು ಅಂತ ಶಾಸಕರು ಕಸರತ್ತು ಶುರು ಮಾಡಿದ್ದಾರೆ. ಹೀಗಾಗಿ ಸಿದ್ದರಾಮಯ್ಯ ಕಾವೇರಿ ನಿವಾಸಕ್ಕೆ ಅನೇಕ ಶಾಸಕರು ಭೇಟಿ ಮಾಡಿ ಸಚಿವ ಸ್ಥಾನ ಕೊಡಿಸಿ ಅಂತ ಸಿದ್ದರಾಮಯ್ಯಗೆ ಮನವಿ ಮಾಡಿದ್ದಾರೆ. ಶಾಸಕರಾದ ಜಾರ್ಜ್, ಜಮೀರ್ ಅಹ್ಮದ್, ರಿಜ್ವಾನ್ ಅರ್ಷದ್, ರಘುಮೂರ್ತಿ, ಗೋವಿಂದಪ್ಪ, ಅಶೋಕ್ ಪಟ್ಟಣ್, ಪುಟ್ಟರಂಗಶೆಟ್ಟಿ, ಎಂಎಲ್‌ಸಿ ಐವಾನ್ ಡಿಸೋಜಾ, ಬಲ್ಕೀಸ್ ಸಿದ್ದು ನಿವಾಸಕ್ಕೆ ಆಗಮಿಸಿ ಚರ್ಚಿಸಿದ್ದಾರೆ.



ಸಿದ್ದರಾಮಯ್ಯ ಭೇಟಿ ಬಳಿಕ ಪ್ರತಿಕ್ರಿಯಿಸಿದ ಎಂಎಲ್‌ಸಿ ಐವಾನ್ ಡಿಸೋಜಾ, ನಾನು ಕ್ರಿಶ್ಚಿಯನ್ ಸಮುಯದಾಯದಿಂದ ಸಚಿವ ಸ್ಥಾನ ಕೇಳಿದ್ದೇನೆ, ನಾನು ಆಕಾಂಕ್ಷಿ. ನಮ್ಮ ಸಮುದಾಯದ ಜಾರ್ಜ್‌ಗೆ ಡಿಸಿಎಂ ಸ್ಥಾನ ಕೊಡಬೇಕು ಎಂದರು. ಇನ್ನು ಚಳ್ಳಕೆರೆ ಶಾಸಕ ರಘುಮೂರ್ತಿ ನನಗೂ ಸಚಿವ ಸ್ಥಾನ ಕೊಡಿ ಅಂತ ಕೇಳಿದ್ದೇನೆ. ಹೈಕಮಾಂಡ್ ಸಚಿವ ಸ್ಥಾನ ಕೊಡುವ ವಿಶ್ವಾಸ ಇದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಹೊಸದುರ್ಗ ಶಾಸಕ ಗೋವಿಂದಪ್ಪ ಸಹ ಆಕಾಂಕ್ಷಿ ಆಗಿದ್ದಾರೆ.

ಇನ್ನು ಸಿಎಂ ಆಗಿ ಕೊನೆಯದಾಗಿ ಸಾರ್ವಜನಿಕರ ಅಹವಾಲನ್ನು ಸಿದ್ದರಾಮಯ್ಯ ಸ್ವೀಕರಿಸಿದರು. ಒಟ್ಟಾರೆ, ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕವೂ ಕಾವೇರಿ ನಿವಾಸದಲ್ಲಿ ರಾಜಕೀಯ ಚಟುವಟಿಕೆ ಗರಿಗೆದರಿದೆ.

**ಪೊನ್ನಣ್ಣಗೆ ಸಚಿವ ಸ್ಥಾನ:** ಇನ್ನು ಈ ಹಿಂದೆ ಸಿದ್ದರಾಮಯ್ಯ ಅವಧಿಯಲ್ಲಿ ಸಿಎಂ ಕಾನೂನು ಸಲಹೆಗಾರರಾಗಿದ್ದ ಪೊನ್ನಣ್ಣ ಅವರಿಗೆ ಸಚಿವಸ್ಥಾನ ಸಿಗುವ ಸಾಧ್ಯತೆ ಇದೆ. ಇವತ್ತು ಸಿದ್ದರಾಮಯ್ಯ ನಿವಾಸಕ್ಕೆ ಪೊನ್ನಣ್ಣ ಕೂಡ ಭೇಟಿ ಕೊಟ್ಟು ಚರ್ಚೆ ನಡೆಸಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಶಾಸಕ ಪೊನ್ನಣ್ಣ, ಕೊಡಗಿಗೆ ಒಂದು ಸ್ಥಾನ ಕೊಡಬೇಕು ಅಂತ ಮೊದಲಿನಿಂದ ಇದೆ. ಜನರು ಕೂಡಾ ಕೊಡಗಿಗೆ ಕೊಡಬೇಕು ಎಂದು ಹೇಳುತ್ತಿದ್ದಾರೆ. ಹೈಕಮಾಂಡ್ ಏನು ಮಾಡುತ್ತಾರೋ ನೋಡೋಣ. ಅಲ್ಲದೇ ನನಗೂ ಕೊಡಗಿಗೆ ಒಂದು ಸ್ಥಾನ ಕೊಡುವ ವಿಶ್ವಾಸ ಇದೆ ಎಂದಿದ್ದಾರೆ.

### ಯತೀಂದ್ರ ಸೈಲೆಂಟ್



ಇಷ್ಟು ದಿನ ಸಿದ್ದರಾಮಯ್ಯ ಪೂರ್ಣಾವಧಿ ಸಿಎಂ ಅಂತಿದ್ದ ಯತೀಂದ್ರ ಅವರು ಈವರೆಗೂ ಸಿದ್ದರಾಮಯ್ಯ ರಾಜೀನಾಮಗೆ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇವತ್ತು ಕಾವೇರಿ ನಿವಾಸಕ್ಕೆ ಭೇಟಿ ನೀಡಿದ್ದ ಯತೀಂದ್ರ ಅವರು ಸಂಪೂರ್ಣವಾಗಿ ಮೌನಕ್ಕೆ ಶರಣಾಗಿದ್ದರು. ಹೈಕಮಾಂಡ್ ಮಾತಿನಂತೆ ಸಿದ್ದರಾಮಯ್ಯ ರಾಜೀನಾಮೆ ನೀಡಿದ್ದಾರೆ.

ದೆಹಲಿಗೆ ತೆರಳಿದ್ದ ವೇಳೆ ತಂದೆ ಜೊತೆ ಯತೀಂದ್ರ ಸಹ ಹೋಗಿದ್ದರು. ಯತೀಂದ್ರಗೆ ಸಚಿವ ಸ್ಥಾನ ಅಥವಾ ಡಿಸಿಎಂ ಸ್ಥಾನ ನೀಡುವ ಬಗ್ಗೆ ಚರ್ಚೆ ಕೂಡ ನಡೆಯುತ್ತಿದೆ. ಇವತ್ತಿನ ಸಿಎಲ್‌ಪಿ ಬಳಿಕ ಮುಂದಿನ ಪ್ರಕ್ರಿಯೆಗಳಲ್ಲಿ ಯಾವ ಸ್ಥಾನ ಸಿಗಲಿದೆ ಎಂಬುದು ಗೊತ್ತಾಗಲಿದೆ. ಹೀಗಾಗಿಯೇ ಯತೀಂದ್ರ ಸಿದ್ದರಾಮಯ್ಯ ಮಾಧ್ಯಮಗಳ ಎದುರು ಮೌನಕ್ಕೆ ಜಾರಿದ್ದಾರೆ.

**ಈ ದಿನದ ದರ** ಪೆಟ್ರೋಲ್: 110.89 ₹/L | ಡೀಸೆಲ್ : 98.80₹/L | ಬಂಗಾರ: ₹ 15,607/Gram 24ct ₹14,296 /Gram 22ct | ಬೆಳ್ಳಿ: ₹290.00/Gram

# ಹಿರಿತನ ಆಧಾರದ ಮೇಲೆ ಸಚಿವ ಸ್ಥಾನ ನೀಡುವಂತೆ ಕೇಳಿದ್ದೇನೆ: ರಾಮಲಿಂಗಾರೆಡ್ಡಿ

• ಉದಯವಾಹಿನಿ, ಬೆಂಗಳೂರು

ನನ್ನ ಸಿನಿಯಾರಿಟಿಗೆ ತಕ್ಕಂತೆ ಸಚಿವ ಸ್ಥಾನ ನೀಡಲಿ. ನಿರ್ದಿಷ್ಟವಾಗಿ ಇಂತಹದ್ದೇ ಖಾತೆ ನೀಡಿ ಎಂದು ಹೇಳುವುದಿಲ್ಲ. ಹಿರಿತನದ ಮೇಲೆ ಖಾತೆ ನೀಡಲಿ ಎಂದು ವಿಧಾನಸೌಧದಲ್ಲಿ ಹಿರಿಯ ಶಾಸಕ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾನು ಎಂಟು ಬಾರಿ ಸಚಿವನಾಗಿದ್ದೇನೆ. ಐದು ಬಾರಿ ಶಾಸಕನಾಗಿದ್ದೇನೆ. ಸಾರಿಗೆ, ಗೃಹ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸೇರಿದಂತೆ ವಿವಿಧ ಇಲಾಖೆಗಳ ಸಚಿವನಾಗಿ ಕಾರ್ಯನಿರ್ವಹಿಸಿದ್ದೇನೆ.. ಇದೀಗ ನೂತನ ಸಿಎಂ ಆಗಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸಲಿದ್ದಾರೆ. ಹಿರಿತನ ಆಧಾರದ ಮೇಲೆ ಸಚಿವ ಸ್ಥಾನ ನೀಡುವಂತೆ ಕೇಳಿದ್ದೇನೆ. ನಿರ್ದಿಷ್ಟವಾಗಿ ಇಂತಹದ್ದೇ ಖಾತೆ ನೀಡಿ ಎಂದು ಕೇಳಿಲ್ಲ. ಯಾವುದೇ ಖಾತೆ ಕೊಟ್ಟರೂ ಕೆಲಸ ಮಾಡುವೆ


ಉದಯವಾಹಿನಿ ಚಿತ್ರ

ಎಂದರು. ಡಿಸಿಎಂ ಹುದ್ದೆಗಳ ಸೃಷ್ಟಿ ಬಗ್ಗೆ ಪ್ರತಿಕ್ರಿಯಿಸಿದ ರಾಮಲಿಂಗಾರೆಡ್ಡಿ, ನನ್ನ ಪ್ರಕಾರ 2023ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ನಡೆದ ಮಾತುಕತೆಯಲ್ಲಿ ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್ ಮಾತುಕತೆ ನಡೆಸಿತ್ತು ಎಂದು ತಿಳಿಸಿದರು.

ಮತ್ತೊಂದೆಡೆ, ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ಕುರಿತು ಮಾತನಾಡಿದ ಪ್ರಿಯಾಂಕ್ ಖರ್ಗೆ, ಸಿಎಲ್‌ಪಿ ಸಭೆ ನಡೆಯುತ್ತಿರುವುದು ಇದೇ ಮೊದಲಲ್ಲ. ಸಿಎಲ್‌ಪಿ ಮೊದಲು ಸಿಎಲ್‌ಪಿ ನಾಯಕನನ್ನು ಆಯ್ಕೆ ಮಾಡುತ್ತದೆ, ನಂತರ ಅದನ್ನು ರಾಜ್ಯಪಾಲರಿಗೆ ಕಳುಹಿಸಲಾಗುತ್ತದೆ. ಮುಖ್ಯಮಂತ್ರಿ ರಾಜೀನಾಮೆ ನೀಡಿದ್ದಾರೆ, ಸಂಪುಟವೂ ಅಸ್ತಿತ್ವದಲ್ಲಿಲ್ಲ. ಮುಂದಿನ ಆಡಳಿತದ ಭಾಗವಾಗಿ ಯಾರು ಇರುತ್ತಾರೆ ಎಂಬುದನ್ನು ನಿರ್ಧರಿಸುವುದು ಹೈಕಮಾಂಡ್‌ಗೆ ಬಿಟ್ಟದ್ದು. ಆದರೆ ಆಡಳಿತದಲ್ಲಿ ಯಾರೇ ಇರಲಿ, ಸಿದ್ದರಾಮಯ್ಯ ನೇತೃತ್ವದ ಆರ್ಥಿಕ ಮತ್ತು ಸಾಮಾಜಿಕ ಕಾರ್ಯ ಅಡಿಪಾಯವನ್ನು ನಾವು ಮುಂದುವರಿಸುತ್ತೇವೆ ಎಂದರು. ಎಂ.ಬಿ. ಪಾಟೀಲ್ ಮಾತನಾಡಿ, ಇಂದು ಸಿಎಲ್‌ಪಿ ಸಭೆ ನಡೆಯುತ್ತಿದೆ ಮತ್ತು ಹೊಸ ನಾಯಕನನ್ನು ಆಯ್ಕೆ ಮಾಡಲಾಗುತ್ತದೆ. ಪಕ್ಷವು ಎಲ್ಲವನ್ನೂ ನಿರ್ಧರಿಸುತ್ತದೆ ಎಂದು ಹೇಳಿದರು.

### ಹೈಕಮಾಂಡ್ ನಿರ್ಧಾರಕ್ಕೆ ತಲೆಬಾಗುವೆ

ಡಿಸಿಎಂ ಹುದ್ದೆಗಳನ್ನು ಸೃಷ್ಟಿಸಬಾರದು. ಕರ್ನಾಟಕ ಮಾತ್ರವಲ್ಲದೇ ಯಾವುದೇ ರಾಜ್ಯದಲ್ಲಿ ಡಿಸಿಎಂ ಹುದ್ದೆ ಸೃಷ್ಟಿಸುವುದು ತರವಲ್ಲ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಆದಾಗ್ಯೂ ಹೈಕಮಾಂಡ್ ನಿರ್ಧಾರಕ್ಕೆ ತಲೆಬಾಗುವೆ ಎಂದರು. ಶಾಸಕಾಂಗ ಪಕ್ಷದ ಸಭೆಯಲ್ಲಿ ನೂತನ ಸಚಿವ ಸಂಪುಟದಲ್ಲಿ ಯಾರೆಲ್ಲಾ ಇರುತ್ತಾರೆ ಎಂಬುದರ ಬಗ್ಗೆ ಇಂದು ಚರ್ಚೆಯಾಗಲಿದೆ ಎಂದ ಅವರು, ಕುರ್ಚಿ ಕಾಳಗ ಸಂಬಂಧ ಸುಗಮವಾಗಿ ಅಧಿಕಾರ ಹಂಚಿಕೆಯಾಗಿದೆಯಾ ಎಂಬ ಪ್ರಶ್ನೆಗೆ ಉತ್ತರಿಸಿದ ರಾಮಲಿಂಗಾರೆಡ್ಡಿ, ಒಪ್ಪಂದದಂತೆ ಅಧಿಕಾರ ಹಂಚಿಕೆಯಾಗಿದೆ.

## ವಿದ್ಯಾಪೀಠ ವೃತ್ತದ ಸುತ್ತಮುತ್ತ ಕುಂಟುತ್ತಾ ಸಾಗಿದ ವೈಟ್ ಟಾಪಿಂಗ್, ಕೊಳವೆ ಅಳವಡಿಕೆ ಕಾಮಗಾರಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಒಂದೆಡೆ, ಕುಂಟುತ್ತಾ ಸಾಗುತ್ತಿರುವ ವೈಟ್ ಟಾಪಿಂಗ್ ಕಾಮಗಾರಿ. ಇನ್ನೊಂದೆಡೆ, ಕೊಳವೆಗಳ ಅಳವಡಿಕೆಗಾಗಿ ನಿರಂತರ ಅಗೆತ. ಮತ್ತೊಂದೆಡೆ, ದೂಳಿನಿಂದ ಕೂಡಿದ ರಸ್ತೆಯಲ್ಲಿ ಸಾಗಲು ಹರಸಾಹಸ ಪಡುವ ವಾಹನ ಸವಾರರು.

ಇದು ವಿದ್ಯಾಪೀಠ ವೃತ್ತದ ಸುತ್ತಮುತ್ತಲಿನ ಸ್ಥಿತಿ. ಹೊರ ವರ್ತುಲ ರಸ್ತೆಯಿಂದ (ಹೊಸಕೆರೆಹಳ್ಳಿ) ವಿದ್ಯಾಪೀಠ ವೃತ್ತದವರೆಗೆ (80 ಅಡಿ ರಸ್ತೆ) 2.7 ಕಿ.ಮೀ. ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭವಾಗಿ ಹತ್ತು ತಿಂಗಳು ಕಳೆದರೂ ಪೂರ್ಣಗೊಂಡಿಲ್ಲ. ಸದ್ಯ 1.5 ಕಿ.ಮೀ. ಮಾತ್ರ ವೈಟ್ ಟಾಪಿಂಗ್ ಕಾಮಗಾರಿ ನಡೆದಿದೆ. ಬ್ಯಾಂಕ್ ಕಾಲೊನಿವರೆಗೆ ಸುಸಜ್ಜಿತ ರಸ್ತೆ ನಿರ್ಮಾಣವಾಗಿದೆ. ಆದರೆ, ಅಲ್ಲಿ ಪಾದಚಾರಿ ಮಾರ್ಗ ನಿರ್ಮಾಣ ಇನ್ನೂ ಅಪೂರ್ಣವಾಗಿದ್ದು, ಕಾಂಕ್ರೀಟ್ ಫ್ಲ್ಯಾಬ್‌ಗಳನ್ನು ಎಲ್ಲೆಂದರಲ್ಲಿ ರಾಶಿ ಹಾಕಲಾಗಿದೆ.

ಇನ್ನೊಂದೆಡೆ ವಿದ್ಯಾಪೀಠ ವೃತ್ತದಿಂದ ಬಸವನಗುಡಿಗೆ ಸಂಪರ್ಕ ಕಲ್ಪಿಸುವ ಕತ್ರಿಗುಪ್ಪೆ ಮುಖ್ಯರಸ್ತೆಯಲ್ಲಿಯೂ ಕೊಳವೆ ಅಳವಡಿಕೆ ಕಾಮಗಾರಿ ನಡೆದಿದ್ದು, ಮಣ್ಣು ಮುಚ್ಚಿದ ಭಾಗಕ್ಕೆ ಮಾತ್ರ ಎರಡು ತಿಂಗಳ ಬಳಿಕ ಅಲ್ಲಲ್ಲಿ ತೇಪೆ ಹಾಕಲಾಗಿದೆ. ಭೂಗತ ಕೇಬಲ್ ಹಾಗೂ ಕೊಳವೆ ಅಳವಡಿಕೆಗಾಗಿ ಅದೇ ರಸ್ತೆಯಲ್ಲಿ ಈಗ ಮತ್ತೆ ಅಗೆಯಲಾಗುತ್ತಿದೆ.

ಬೆಸ್ಕಾಂನವರು ಭೂಗತ ಕೇಬಲ್ ಹಾಗೂ ಜಲಮಂಡಳಿಯವರು ಕೊಳವೆಗಳನ್ನು ಅಳವಡಿಸಲು, ವಿದ್ಯಾಪೀಠ ವೃತ್ತದಿಂದ ಬಸವನಗುಡಿ ಕಡೆ ಸಾಗುವ ಕತ್ರಿಗುಪ್ಪೆ ಮುಖ್ಯರಸ್ತೆಯನ್ನು ಎರಡು ತಿಂಗಳ ಹಿಂದೆ ಅಗೆದಿದ್ದರು. ಕೆಲ ದಿನಗಳು ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ರಸ್ತೆ ತುಂಬಾ ಮಣ್ಣಿನ ರಾಶಿ ಆವರಿಸಿಕೊಂಡಿತ್ತು. ಸಂಪೂರ್ಣ ಕಿತ್ತುಹೋದ ರಸ್ತೆಗೆ ಮರು ಡಾಂಬರೀಕರಣ ಮಾಡುವ ಬದಲು, ಕಿತ್ತ ಕಡೆ ಮಾತ್ರ ತೇಪೆ ಹಾಕಲಾಗಿದೆ. ಎರಡು ಮಳೆ ಬಂದಲ್ಲಿ ರಸ್ತೆ ಮತ್ತೆ ಸಂಪೂರ್ಣ ಹಾಳಾಗಲಿದೆ' ಎಂದು ಸ್ಥಳೀಯರು ದೂರುತ್ತಾರೆ.

## ಯಶಸ್ಸಿನ ವ್ಯತ್ಯಾಸದ ಅರಿವಿರಬೇಕು

• ಉದಯವಾಹಿನಿ, ಬೆಂಗಳೂರು

ಸರಿದಾರಿಯಲ್ಲಿ ಸಾಗಿ ಪಡೆಯುವ ಅರ್ಹ ಯಶಸ್ಸು ಮತ್ತು ಅಡ್ಡಮಾರ್ಗದಲ್ಲಿ ಗಳಿಸಿದ ಯಶಸ್ಸು ಎರಡರ ನಡುವಿನ ವ್ಯತ್ಯಾಸ ತಿಳಿದು ಕೊಳ್ಳಬೇಕು. ಆ ಅರಿವಿನ ಮೂಲಕ ಜ್ಞಾನವನ್ನು ಮೌಲ್ಯಯುತವಾಗಿಸಿಕೊಳ್ಳ ಬೇಕು ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗ್ಡೆ ಹೇಳಿದರು. ಎಂ.ಪಿ. ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

'ಅಕ್ಷರಸ್ಥರು ಸಾಮಾಜಿಕ ಹೊಣೆಗಾರಿಕೆಯಿಂದ ವಿಮುಖರಾಗುತ್ತಿರುವುದು ಸಮಾಜದ ಬಹುದೊಡ್ಡ ಅಪಾಯ. ಮೌಲ್ಯವಿಲ್ಲದ ಜ್ಞಾನಕ್ಕೆ ಬೆಲೆಇಲ್ಲ ಎನ್ನುವುದನ್ನು ನಮ್ಮ ಪರಂಪರೆಯಲ್ಲಿ ಖಚಿತವಾಗಿ ಹೇಳಲಾಗಿದೆ. ವಿದ್ಯೆಯು ಜವಾಬ್ದಾರಿಯುತ ನಾಗರಿಕರಾಗಲು ಪ್ರೇರಣೆ ನೀಡಬೇಕು. ಆಗ ನಮ್ಮ ಪ್ರಜಾಪ್ರಭುತ್ವವು ಸುರಕ್ಷಿತವಾಗಿ ಉಳಿಯಲು ಸಾಧ್ಯ' ಎಂದು ತಿಳಿಸಿದರು. ಉಳ್ಳವರು, ಇಲ್ಲದವರ ನಡುವೆಕಂದಕ ವಿಸ್ತಾರವಾಗುತ್ತಾ ಹೋದರೆಸಮಾಜದಲ್ಲಿ ಅಶಾಂತಿ ಉಂಟಾಗಬಹುದು ಎಂದು ಎಚ್ಚರಿಸಿದರು. ಎಂ.ಪಿ. ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಚೇರ್ಮನ್ ಎನ್. ರಾಮಾನುಜ ಅಧ್ಯಕ್ಷತೆ ವಹಿಸಿ ಮಾತನಾಡಿ, ಎಂ.ಬಿ.ಎ ಎನ್ನುವುದು ಶ್ರೀಮಂತರ ಸ್ವತ್ತಾಗಿದೆ ಮಧ್ಯಮ ವರ್ಗದವರ ಪಾಲಿಗೆ ಗಗನ ಕುಸುಮವಾಗಿದ್ದ ಕಾಲದಲ್ಲಿ ನಮ್ಮ ಸಂಸ್ಥೆ ಆರಂಭವಾಯಿತು. ಮಾನವೀಯ ನೆಲೆಯಲ್ಲಿ ವ್ಯವಹಾರ ಕಲಿಸುವ ಪಠ್ಯಕ್ಕೆ ಸೀಮಿತವಾಗದೆ ಪರಿಸರದೊಡನೆ ಒಡನಾಡುವ ಸಹಜ ಮತ್ತು ವಿಶ್ವಾಸಾರ್ಹ ಮಾರ್ಗವನ್ನು ಅಳವಡಿಸಿಕೊಳ್ಳಲಾಗಿದೆ.

## ಡಿಸಿಎಂಗಳ ಹುದ್ದೆ ಬೇಡವೇ ಬೇಡ ಡಿಕೆಶಿ, ಸತೀಶ್ ಜಾರಕಿಹೊಳಿ ಪ್ರಸ್ತಾಪ

• ಉದಯವಾಹಿನಿ, ಬೆಂಗಳೂರು

ಡಿಸಿಎಂಗಳ ಹುದ್ದೆ ಬೇಡವೇ ಬೇಡ ಎಂದು ಕಾಂಗ್ರೆಸ್ ಹೈಕಮಾಂಡ್ ಮುಂದೆ ಭಾವಿ ಸಿಎಂ ಡಿಕೆ ಶಿವಕುಮಾರ್ ಹಾಗೂ ಸತೀಶ್ ಜಾರಕಿಹೊಳಿ ಪ್ರಸ್ತಾಪ ಇಟ್ಟಿದ್ದಾರೆ ಅನ್ನೋ ಮಾಹಿತಿ ಲಭ್ಯವಾಗಿದೆ.

ನೂತನ ಕ್ಯಾಬಿನೆಟ್‌ಗೆ ಕಸರತ್ತು ನಡೆಯುತ್ತಿರುವ ಹೊತ್ತಿನಲ್ಲೇ ಈ ಪ್ರಸ್ತಾಪ ನಡೆದಿದೆ. ದಲಿತ, ಲಿಂಗಾಯತ, ಅಲ್ಪಸಂಖ್ಯಾತ, ಓಬಿಸಿ ಸಮುದಾಯಗಳಿಗೆ ಮಣೆ ಹಾಕಬೇಕು.

ಯಾರಿಗಾದರೂ ಇಬ್ಬರಿಗೆ ಕೊಟ್ಟರೂ ಅಸಮಾಧಾನ ಸಾಧ್ಯತೆಯಿದೆ. ನಾಲ್ಕು ಡಿಸಿಎಂ ಸೃಷ್ಟಿ ಮಾಡಿದ್ರೆ, ಹಾಸ್ಯಾಸ್ಪದ ಎಂದು ಹೈಕಮಾಂಡ್ ಬಳಿ ಪ್ರಸ್ತಾಪವಿಟ್ಟಿದ್ದಾರೆ. ಭಾರತ ಯುಎಸ್ ವ್ಯಾಪಾರ ಒಪ್ಪಂದ 99% ಪೂರ್ಣ ಶೀಘ್ರದಲ್ಲೇ ಫೈನಲ್ ಡೀಲ್ ನಿರೀಕ್ಷೆ ಈ ಕುರಿತು ಸೋಮವಾರ ರಾಹುಲ್ ಮುಂದೆ ತೀರ್ಮಾನ ಮಾಡೋಣ ಎಂದು ಕೆ.ಸಿ ವೇಣುಗೋಪಾಲ್ ಸ್ಪಷ್ಟನೆ ನೀಡಿದ್ದಾರೆ.

## ಬೆಂಗಳೂರಿನ ಶಾಲೆಯಲ್ಲಿ ಭಾರೀ ಅಗ್ನಿ ಅವಘಡ ತಪ್ಪಿದ ಅನಾಹುತ

• ಉದಯವಾಹಿನಿ, ಬೆಂಗಳೂರು

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ತರಗತಿ ನಡೆಯುತ್ತಿದ್ದ ವೇಳೆಯೇ ಶಾಲಾ ಕಟ್ಟಡದಲ್ಲಿ ಅಗ್ನಿ ಅವಘಡ ಸಂಭವಿಸಿರುವ ಘಟನೆ ಕೆಂಗೇರಿ ಸಮೀಪವಿರುವ ನಾಗದೇವನಹಳ್ಳಿಯ ಚಿತ್ರಕೂಟ ಕೌಶಲ್ಯ ಶಾಲೆಯಲ್ಲಿ ಸಂಭವಿಸಿದೆ.

ಶಾಲಾ ಕಟ್ಟಡದ 3 ಮತ್ತು 4ನೇ ಮಹಡಿಯಲ್ಲಿ ಬೆಂಕಿ ಅವಘಡ ಸಂಭವಿಸುತ್ತಿದ್ದಂತೆ ಶಿಕ್ಷಕರು ಎಲ್ಲಾ ಮಕ್ಕಳನ್ನು ಹೊರಗೆ ಕಳುಹಿಸಿದ್ದಾರೆ. ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರು ದೌಡಾಯಿಸಿದ್ದು, ಬೆಂಕಿ ನಂದಿಸಲು ಕಾರ್ಯಾಚರಣೆ ನಡೆಸಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಸುಮಾರು 2 ಸಾವಿರ ಮಕ್ಕಳು ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 9 ಗಂಟೆಗೆ ಎಂದಿನಂತೆ ಶಾಲೆ ಪ್ರಾರಂಭವಾಗಿದೆ. 10:15 ರ ಸುಮಾರಿಗೆ ಶಾಲೆಯ 4ನೇ ಮಹಡಿಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ.

## ಗೃಹಲಕ್ಷ್ಮಿ ಯೋಜನೆಯಲ್ಲಿ ಅವ್ಯವಹಾರ

## ನಿರ್ಗಮನದ ಹೊಸ್ತಿಲಲ್ಲಿ ಸಿದ್ದರಾಮಯ್ಯಗೆ ಪ್ರಶ್ನೆ

# ಎರಡು ತಿಂಗಳ ಗೃಹಲಕ್ಷ್ಮಿ ಬಾಕಿ ಬಗ್ಗೆ ಸ್ಪಷ್ಟನೆ ಕೊಡಿ

## 5,000 ಕೋಟಿ ರೂ. ಎಲ್ಲಿ ಹೋಗಿದೆ ಎಂದು ಹೇಳುವಿರಾ?

## ಹಂಗಾಮಿ ಸಿಎಂಗೆ ಸುರೇಶ್ ಕುಮಾರ್ ಪತ್ರ

• ಉದಯವಾಹಿ,ಬೆಂಗಳೂರು




ಉದಯವಾಹಿನಿ ಚಿತ್ರ

2025ರ ಫೆಬ್ರವರಿ, ಮಾರ್ಚ್ ತಿಂಗಳ ಗೃಹಲಕ್ಷ್ಮಿ ಬಾಕಿ ಬಗ್ಗೆ ಸ್ಪಷ್ಟನೆ ಕೊಡಿ ಎಂದು ಹಂಗಾಮಿ ಸಿಎಂ ಸಿದ್ದರಾಮಯ್ಯ ಅವರಿಗೆ ಬಿಜೆಪಿ ಶಾಸಕ ಸುರೇಶ್ ಕುಮಾರ್ ಪತ್ರ ಬರೆದಿದ್ದಾರೆ. 2025ರ ಫೆಬ್ರವರಿ, ಮಾರ್ಚ್ ತಿಂಗಳ ಗೃಹಲಕ್ಷ್ಮಿ ಬಾಕಿಗೆ ಸ್ಪಷ್ಟನೆ ಹಾಗೂ ಬಾಕಿ ಪಾವತಿ ಮಾಡುವಂತೆ ಒತ್ತಾಯಿಸಿ ಪತ್ರ ಬರೆದಿದ್ದಾರೆ. ಕಳೆದ ವರ್ಷ, 2025 ಡಿ.9ರಂದು, ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ವಿಧಾನ ಮಂಡಲದ ಚಳಿಗಾಲದ ಅಧಿವೇಶನದಲ್ಲಿ, ವಿಧಾನಸಭೆಯಲ್ಲಿ ನಮ್ಮ ಪಕ್ಷದ ಶಾಸಕ ಶ್ರೀ ಮಹೇಶ ಟೆಂಗಿನಕಾಯಿರವರು ಒಂದು ಬಹಳ ಮಹತ್ವದ ವಿಚಾರವನ್ನು ಸದನದ ಗಮನಕ್ಕೆ ತಂದರು. ತಮ್ಮ ಪಕ್ಷದ ಚುನಾವಣಾ ಗ್ಯಾರಂಟಿಯಾದ, ಬಹಳಷ್ಟು ಜನರ ಮತವನ್ನುಗಳಿಸಲು ಸಾಧನವಾಗಿದ್ದ, ಗೃಹಲಕ್ಷ್ಮಿ ಯೋಜನೆಯಲ್ಲಿ ಸಂಭವಿಸಿದ್ದ ಬಹಳ ಗಂಭೀರ ಪ್ರಮಾದವನ್ನು ಅಂದು ಪ್ರಸ್ತಾಪಿಸಿದರು. 2025 ಫೆಬ್ರವರಿ ಹಾಗೂ ಮಾರ್ಚ ತಿಂಗಳುಗಳ ಗೃಹಲಕ್ಷ್ಮಿ ಯೋಜನೆಯ ಹಣ ರಾಜ್ಯದ ಕುಟುಂಬಗಳಿಗೆ ತಲುಪದಿರುವ ಆರೋಪ ಮಾಡಿದರು. ಇದರ ಒಟ್ಟು ಮೊತ್ತ 5000 ಕೋಟಿ ರೂ.ಯಾಗಿದ್ದು, 1.14 ಕೋಟಿ ಗೃಹಲಕ್ಷ್ಮಿಯರ ಪಾಲಿಗೆ ಇದೊಂದು ದೊಡ್ಡ ವಂಚನೆ. ತಮ್ಮ ಸಚಿವ ಸಂಪುಟದ ಮಾನ್ಯ ಸಚಿವೆ ಹಣ ಪಾವತಿಯಾಗಿದೆ ಎಂದು ಮೊದಲು ಹೇಳಿದ್ದರು. ಆದರೆ ನನ್ನ ಗೆಳೆಯ ಶಾಸಕ ಪಾವತಿ ಆಗಿಲ್ಲದಿರುವುದನ್ನು ದಾಖಲೆ ಸಮೇತ ಸಭೆಯ ಗಮನಕ್ಕೆ ತಂದು 5000 ಕೋಟಿ ರೂ. ಎಲ್ಲಿ ಹೋಯಿತು ಎಂದು ಸರ್ಕಾರವನ್ನು ಪ್ರಶ್ನಿಸಿದ್ದರು. ಅದಕ್ಕೆ ಸರ್ಕಾರದ ನಿರುತ್ತರವೇ ಉತ್ತರವಾಗಿತ್ತು. ಇದು ಸಣ್ಣ ಮೊತ್ತವಲ್ಲ ಮತ್ತು ಈ ಹಣ ಫಲಾನುಭವಿಗಳಿಗೆ ತಲುಪದಿರುವುದು ಸಣ್ಣ ಪ್ರಮಾದವಲ್ಲ. ರಾಜ್ಯದ ತಿಜೋರಿಯನ್ನೇ ಲೂಟಿ ಹೊಡೆದಿರುವ ಸ್ಪಷ್ಟ ಉದಾಹರಣೆ ಇದು ಎಂದು ಅಂದು ಸದನ ಮತ್ತು ಇಡೀ ರಾಜ್ಯ ಭಾವಿಸಿತ್ತು. ರಾಜ್ಯದ ಜನತೆಯಿಂದ ಸಂಗ್ರಹ ಮಾಡಿರುವ ತೆರಿಗೆಯ ಪಾವಿತ್ರ್ಯತೆ ಕುರಿತು ನಾನು ನಿಮಗೆ ಏನೂ ಹೇಳಬೇಕಿಲ್ಲ. ಪ್ರತಿಯೊಂದು ಪೈಸೆಗೂ ಸರ್ಕಾರ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಿದೆ. ಇದು ಜನತೆ ಅಪೇಕ್ಷಿಸುವ ಉತ್ತರದಾಯಿತ್ವ. ಕಳೆದ ಡಿಸೆಂಬರ್ 9ರ ಶಾಸಕರ ಈ ಪ್ರಸ್ತಾವನೆಗೆ ಇದೀಗ ಐದು ತಿಂಗಳು ಪೂರ್ಣಗೊಂಡಿವೆ. ಆದರೆ ಆ ಪ್ರಶ್ನೆಗೆ ಉತ್ತರ ದೊರಕಿಲ್ಲ.

ರಾಜ್ಯದ ಗೃಹಲಕ್ಷ್ಮಿಯರಿಗೆ ಈ ಹಣ ತಲುಪಿಲ್ಲ. ಈ ಬಾರಿ ಮೊತ್ತದ ಹಣ ಎಲ್ಲಿ ಯಾರಿಗೆ ಹೋಗಿದೆ ಎಂಬುದು ಇದುವರೆಗೂ ರಾಜ್ಯದ ನಾಗರಿಕರಿಗೆ ತಿಳಿದುಬಂದಿಲ್ಲ. ತಮ್ಮಲ್ಲಿ ನನಗೆ ಗೌರವವಿರುವುದರಿಂದ, ನಾನು ಈ ಮನವಿ ಮಾಡಿಕೊಳ್ಳುತ್ತಿದ್ದೇನೆ. ರಾಜ್ಯದ ಗೃಹಲಕ್ಷ್ಮಿಯರಿಗೆ ತಲುಪಬೇಕಾಗಿದ್ದ, 2025ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳ ಹಣದ ಸ್ಥಿತಿಗತಿ ಏನು ಎಂಬುದನ್ನು ರಾಜ್ಯಕ್ಕೆ ತಿಳಿಸಬೇಕಿರುವುದು ರಾಜ್ಯದ ತಿಜೋರಿಯ ಸಂಪೂರ್ಣ ನಿಯಂತ್ರಣ ಹೊಂದಿದ್ದ ನಿಮ್ಮ ಜವಾಬ್ದಾರಿ. ಯಾವುದೇ ಸರ್ಕಾರದ ನೈತಿಕತೆ ಪ್ರಶ್ನೆ. ಆ ಜವಾಬ್ದಾರಿಯನ್ನು ತಾವು ಪ್ರಾಮಾಣಿಕವಾಗಿ ನಿರ್ವಹಿಸಿ ರಾಜ್ಯಕ್ಕೆ ಈ ಭಾರಿ ಮೊತ್ತದ ಹಣದ ಹಣೆಬರಹದ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಆಗ್ರಹಿಸಿದ್ದಾರೆ.

### ಗಂಭೀರ ಆರೋಪ

ಈ ಆರೋಪವು ಅತೀ ಸೂಕ್ಷ್ಮ ಸಮಯದಲ್ಲಿ ಹೊರಬಿದ್ದಿದೆ. ಕಾಂಗ್ರೆಸ್ ಹೈಕಮಾಂಡ್‌ನ ಆದೇಶದ ಮೇರೆಗೆ ಸಿದ್ದರಾಮಯ್ಯ ಅವರು ರಾಜೀನಾಮೆ ಸಲ್ಲಿಸಿದ್ದು, ಹೊಸ ಮುಖ್ಯಮಂತ್ರಿಯ ಆಯ್ಕೆಗಾಗಿ ಶಾಸಕಾಂಗ ಪಕ್ಷದ ಸಭೆ ನಡೆಯುತ್ತಿರುವ ದಿನವೇ ಈ ಪ್ರಶ್ನೆ ಉದ್ಭವಿಸಿರುವುದು ಬಿಜೆಪಿಗೆ ರಾಜಕೀಯ ಅಸ್ತ್ರವಾಗಿ ಸಿಕ್ಕಿದೆ. ಸಿದ್ದರಾಮಯ್ಯ ಅವರು ಆರ್ಥಿಕ ಶಿಸ್ತಿಗೆ ಹೆಸರುವಾಸಿಯಾದವರು ಎಂದು ಬಿಂಬಿಸಿಕೊಂಡಿದ್ದರು. ಆದರೆ, ಕಲ್ಯಾಣ ಯೋಜನೆಗಳ ಹಣವೇ ಪೋಲಾಗಿರುವುದು ಅಥವಾ ದುರುಪಯೋಗವಾಗಿರುವುದು ನಿಜವೇ ಆಗಿದ್ದಲ್ಲಿ, ಅದು ಮುಂದಿನ ಆಡಳಿತದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಹಣ ಯಾರ ಜೇಬು ಸೇರಿತು ಎಂಬ ಸುರೇಶ್ ಕುಮಾರ್ ಅವರ ಪ್ರಶ್ನೆಯು ನೇರವಾಗಿ ಸರ್ಕಾರದ ಪಾರದರ್ಶಕತೆಯ ಮೇಲೆ ಸಂಶಯ ಮೂಡಿಸಿದೆ.

### ಪತ್ರದಲ್ಲೇನಿದೆ?

ತಮ್ಮ ಪಕ್ಷದ ಸೂಚನೆಯಂತೆ ತಾವು ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೀರಿ. ತಮ್ಮ ಮುಂದಿನ ದಿನಗಳು ಶುಭಕರವಾಗಿರಲಿ ಎಂದು ನಾನು ಮನ:ಪೂರ್ವಕವಾಗಿ ಹಾರೈಸುತ್ತೇನೆ. ತಾವು ನಮ್ಮ ರಾಜ್ಯದ ಮುಖ್ಯಮಂತ್ರಿ ಆಗಿದ್ದ ಜೊತೆಗೆ ಅದೇ ಸಮಯದಲ್ಲಿ ನಮ್ಮ ರಾಜ್ಯದ ಹಣಕಾಸು ಸಚಿವರೂ ಆಗಿದ್ರಿ. ಇಡೀ ದೇಶದಲ್ಲಿ ದಾಖಲೆ ಸಂಖ್ಯೆಯ ಬಜೆಟ್‌ಗಳನ್ನು ಮಂಡಿಸಿದ ಹೆಗ್ಗಳಿಕೆ ನಿಮ್ಮದು. ಒಂದು ರೀತಿಯಲ್ಲಿ ತಾವು ನಮ್ಮ ರಾಜ್ಯದ ಆರ್ಥಿಕ ತಜ್ಞರು.

# ಸಿಎಲ್‌ಪಿ ಸಭೆಯಲ್ಲಿ ಸಚಿವರ ಪಟ್ಟಿ ಅಂತಿಮಗೊಳ್ಳಲಿದೆ: ಸತೀಶ್ ಜಾರಕಿಹೊಳಿ

• ಉದಯವಾಹಿನಿ, ಬೆಂಗಳೂರು

ಹೈಕಮಾಂಡ್ ನಿರ್ಧಾರದಂತೆ ಇಂದು ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಅಧಿಕೃತವಾಗಿ ಸಿಎಂ ಸ್ಥಾನಕ್ಕೆ ಡಿ. ಕೆ. ಶಿವಕುಮಾರ್ ಅವರ ಹೆಸರು ಘೋಷಣೆಯಾಗಲಿದೆ. ಇಂದಿನ ಸಭೆಯಲ್ಲಿ ಸಚಿವರ ಪಟ್ಟಿ ಅಂತಿಮಗೊಳ್ಳಲಿದೆ ಎಂದು ಮಾಜಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು. ನಗರದ ಸರ್ಕಾರಿ ನಿವಾಸದಲ್ಲಿ ಮಾಧ್ಯಮದರೊಂದಿಗೆ ಮಾತನಾಡಿದ ಅವರು, ಇಂದಿನ ಸಿಎಲ್‌ಪಿ ಸಭೆ ಒಂದು ಲೈನ್


ಉದಯವಾಹಿನಿ ಚಿತ್ರ

ಅಜೆಂಡಾ ಅಷ್ಟೇ. ಈಗಾಗಲೇ ಹೈಕಮಾಂಡ್ ತೀರ್ಮಾನದಂತೆ ಡಿ. ಕೆ. ಶಿವಕುಮಾರ್ ಮುಂದಿನ ಸಿಎಂ ಆಗಲಿದ್ದಾರೆ. ಶಾಸಕಾಂಗ ಪಕ್ಷದ ಸಭೆಯಲ್ಲಿ ಅಧಿಕೃತವಾಗಿ ಘೋಷಣೆ ಮಾಡಲಾಗುತ್ತದೆ ಎಂದಿದ್ದಾರೆ. ಪ್ರಮಾಣ ವಚನದ ಬಗ್ಗೆ ಸಮಯ, ದಿನಾಂಕ, ನಿಗದಿ ಮಾಡಿಕೊಳ್ಳಲು ರಾಜ್ಯಪಾಲರನ್ನ ಡಿ. ಕೆ. ಶಿವಕುಮಾರ್ ಅವರು ಭೇಟಿಯಾಗಿದ್ದಾರೆ. ಮೂರು-ನಾಲ್ಕು ಡಿಸಿಎಂ ಮಾಡುವ ವಿಚಾರ ಸಂಬಂಧ ವರಿಷ್ಠರು ಈ ಬಗ್ಗೆ ತೀರ್ಮಾನಿಸಲಿದ್ದಾರೆ. ಅಂತಿಮವಾಗಿ ಆಗಬಹುದು ಎಂದು ಹೇಳಿದರು. ಕೆಪಿಸಿಸಿ ಅಧ್ಯಕ್ಷರನ್ನಾಗಿ ಯಾರನ್ನು ಮಾಡುತ್ತಾರೆ ಎಂಬುದು ಗೊತ್ತಿಲ್ಲ, ಅಂತಿಮವಾಗಿ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತೆ.

ಸಹಜವಾಗಿ ಇಬ್ಬರ-ಮೂವರು ಹೆಸರು ಇಟ್ಟುಕೊಂಡು ಇರ್ತಾರೆ. ಈ ಪೈಕಿ ಯಾರು ಸೂಕ್ತ ಅಂತ ನೋಡಿಕೊಂಡು ನಿರ್ಧರಿಸಲಿದ್ದಾರೆ. ಹೀಗಾಗಿ, ತಾಳ್ಮೆಯಿಂದ ಕಾಯಬೇಕು ಎಂದರು. ಸತೀಶ್ ಜಾರಕಿಹೊಳಿಗೆ ಡಿಸಿಎಂ ಸ್ಥಾನ ಕೊಡಬೇಕು ಎಂಬ ಒತ್ತಾಯ ಕೇಳಿ ಬರುತ್ತಿದೆ .

## ಬೆಂಗಳೂರಲ್ಲಿ ಧಾರಾಕಾರ ಮಳೆ: ಆಟೋ ಮೇಲೆ ಕಾಂಪೌಂಡ್ ಕುಸಿದು ಚಾಲಕ ಸ್ಥಳದಲ್ಲೇ ಸಾವು

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಸುರಿದ ಭಾರಿ ಮಳೆಯಿಂದ ಹಲವೆಡೆ ಅವಾಂತರ ಸೃಷ್ಟಿಯಾಗಿದೆ. ಖಾಸಗಿ ಕ್ಲಬ್‌ನ ಕಾಂಪೌಂಡ್ ಗೋಡೆ ಕುಸಿದು 46 ವರ್ಷದ ಆಟೋರಿಕ್ಷಾ ಚಾಲಕ ಸಾವನ್ನಪ್ಪಿರುವ ಘಟನೆ ವಿಜಯನಗರ ಪ್ರದೇಶದಲ್ಲಿ ಜರುಗಿದೆ.

ಮೃತ ಚಾಲಕನನ್ನು ಗಂಗೊಂಡನಹಳ್ಳಿಯ ನಿವಾಸಿ ಶಿವಬೋರಯ್ಯ (46) ಎಂದು ಗುರುತಿಸಲಾಗಿದೆ. ಹಠಾತ್ ಮಳೆ ಬಂದಾಗ ಗಂಗಬೋರಯ್ಯ ವಿಜಯನಗರದ ಕ್ಲಬ್‌ವೊಂದರ ಕಾಂಪೌಂಡ್ ಗೋಡೆಯ ಬಳಿ ತಮ್ಮ ಆಟೋರಿಕ್ಷಾವನ್ನು ನಿಲ್ಲಿಸಿಕೊಂಡಿದ್ದಾಗ ಘಟನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೂಲತಃ ಮಂಡ್ಯ ಜಿಲ್ಲೆಯ ಶಿವಬೋರಯ್ಯ, 35 ವರ್ಷಗಳಿಂದ ಅತ್ತಿಗುಪ್ಪೆಯಲ್ಲಿ ವಾಸವಾಗಿದ್ದರು. ಅನಾರೋಗ್ಯದಿಂದ ಬಳಲುತ್ತಿದ್ದ ತಾಯಿಯನ್ನು ಶುಕ್ರವಾರ ಆಸ್ಪತ್ರೆಗೆ ಕರೆದೊಯ್ದಿದ್ದರು. ತಾಯಿ ಹಾಗೂ ಸಹೋದರಿಯನ್ನು ಆಸ್ಪತ್ರೆಯಲ್ಲಿ ಬಿಟ್ಟು ತಾವು ಊಟ ಮಾಡಲು ಬಂದಾಗ ಅವಘಡ ಸಂಭವಿಸಿದೆ. ಮಳೆ ಕಡಿಮೆಯಾಗಲೆಂದು ಆಟೋದಲ್ಲಿ ಕುಳಿತು ಕಾಯುತ್ತಿದ್ದಾಗ, ನಿರಂತರ ಮಳೆಯಿಂದ ದುರ್ಬಲಗೊಂಡಿದ್ದ ಕಾಂಪೌಂಡ್ ಗೋಡೆ ಇದ್ದಕ್ಕಿದ್ದಂತೆ ಆಟೋರಿಕ್ಷಾದ ಮೇಲೆ ಕುಸಿದು ಬಿದ್ದಿದೆ ಎಂದು ತಿಳಿದುಬಂದಿದೆ.


ಉದಯವಾಹಿನಿ ಚಿತ್ರ

ವಾಹನವು ಅವಶೇಷಗಳ ಅಡಿ ಸಿಲುಕಿ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಚಾಲಕನಿಗೆ ತೀವ್ರ ಗಾಯಗಳಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.


ಈ ಬಗ್ಗೆ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ನಗರದ ಮೆಜೆಸ್ಟಿಕ್, ಕಾರ್ಪೋರೇಷನ್, ಕೆ.ಆರ್. ಮಾರ್ಕೆಟ್, ಶಿವಾನಂದ ಸರ್ಕಲ್, ಜಯನಗರ ಹಾಗೂ ಮಲ್ಲೇಶ್ವರಂ, ರಾಜಾಜಿನಗರ, ಮೈಸೂರು ರಸ್ತೆ, ಸೇರಿದಂತೆ ಹಲವೆಡೆ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆ ಅಬ್ಬರಿಸಿತು.

## ಬದುಕಲು ಕಲಿಸುವ ಸೇವೆ; ಶ್ರೀ ಶ್ರೀ ರವಿಶಂಕರ್ ಗುರೂಜಿ

• ಉದಯವಾಹಿನಿ, ಬೆಂಗಳೂರು

ನಮ್ಮ ಮನಸ್ಸನ್ನು ನಾವೇ ನಿಯಂತ್ರಿಸಬೇಕು ಮತ್ತು ಬಾಹ್ಯ ಸಂಗತಿಗಳು ಅದನ್ನು ಪ್ರಭಾವಿಸದಂತೆ ಹೇಗೆ ಬದುಕಬೇಕು ಎಂಬುದನ್ನು ಕಲಿಸಿಕೊಡುವ ಕೆಲಸವನ್ನು ಆರ್ಟ್ ಆಫ್ ಲಿವಿಂಗ್ ಮಾಡುತ್ತಿದೆ' ಎಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು. ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವದಲ್ಲಿ ಅವರು ಭಾಗಿಯಾಗಿದ್ದರು.

ಜೀವನದ ಪ್ರತಿಕ್ಷಣವೂ ನಮ್ಮೆದುರು ಹೊಸ ಸಂಘರ್ಷವನ್ನು ತಂದೊಡ್ಡುತ್ತದೆ. ಅವುಗಳಿಂದ ಪ್ರಭಾವಿತರಾಗದೆ, ನಮ್ಮ ಗುರಿಯೆಡೆ ಸಾಗಬೇಕು. ಯೋಗ, ಧ್ಯಾನ, ಸಮಾಜ ಸೇವೆ, ಆಯುರ್ವೇದ, ಸಾವಯವ ಕೃಷಿ, ಪರಿಸರ ಸಂರಕ್ಷಣೆಯು ನಮ್ಮ ಗುರಿಯೆಡೆಗೆ ಸಾಗುವ ಮಾರ್ಗಗಳು. ಅದನ್ನು ಆರ್ಟ್ ಆಫ್ ಲಿವಿಂಗ್ ಮೂಲಕ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ತೋರಿಸಿಕೊಟ್ಟಿದ್ದಾರೆ'


ಉದಯವಾಹಿನಿ ಚಿತ್ರ

ಎಂದರು. ಮನುಷ್ಯ ಸದಾ ಹೊಸತನ್ನು ಕಲಿಯಬೇಕು. ಆಧುನಿಕತೆಯನ್ನು ಬರಮಾಡಿಕೊಳ್ಳಬೇಕು. ಹಾಗೆಂದ ಮಾತ್ರಕ್ಕೆ ನಮ್ಮ ಪರಂಪರೆ ಮತ್ತು ಸಂಪ್ರದಾಯಗಳನ್ನು ಮರೆಯಬಾರದು. ನಮ್ಮ ಪರಂಪರೆಯಲ್ಲಿರುವ ಒಳಿತನ್ನು ಉಳಿಸಿಕೊಂಡು, ಆಧುನಿಕತೆಯ ಒಳಿತುಗಳನ್ನು ಒಳಗೊಳ್ಳಬೇಕು. ಅಂತಹ ಜೀವನಮಾರ್ಗವನ್ನು ಆರ್ಟ್ ಆಫ್ ಲಿವಿಂಗ್ ತೋರಿಸಿಕೊಟ್ಟಿದೆ. ಇದು ಅನುಕರಣಯೋಗ್ಯ' ಎಂದರು.

'ನಾವು ನಮ್ಮ ಬದುಕಿನ ಪ್ರತಿಕ್ಷಣವನ್ನೂ ಜೀವಿಸಬೇಕು. ನಮ್ಮ ಬದುಕನ್ನು ಇತರರಿಗಾಗಿ, ಸಮಾಜ ಸೇವೆಗಾಗಿ, ದೇಶಕ್ಕಾಗಿ, ಮಾನವತೆಗಾಗಿ ಸಮರ್ಪಿಸಿಕೊಳ್ಳಬೇಕು. ಇಡೀ ಜಗತ್ತನ್ನೇ ನಮ್ಮ ಕುಟುಂಬ ಎಂದು ಭಾವಿಸಬೇಕು' ಎಂದು ಹೇಳಿದರು.

ಆರ್ಟ್ ಆಫ್ ಲಿವಿಂಗ್ ತನ್ನ 45ನೇ ವಾರ್ಷಿಕೋತ್ಸವದ ಭಾಗವಾಗಿ ಹತ್ತಾರು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಮೇಟ್ 16ರಂದು ಪ್ರಧಾನಿ ನರೇಂದ್ರ ಮೋದಿ ಅವರು ವಾರ್ಷಿಕೋತ್ಸವ ಉದ್ಘಾಟನೆಯ ಆರ್ಟ್ ಆಫ್ ಲಿವಿಂಗ್‌ನ ನೂತನ ಧ್ಯಾನ ಮಂದಿರವನ್ನು ಲೋಕಾರ್ಪಣೆ ಮಾಡಿದ್ದರು. ಇದೇ 31ರವರೆಗೆ ನಡೆಯಲಿರುವ ವಿವಿಧ ಕಾರ್ಯಕ್ರಮಗಳಲ್ಲಿ ಆರ್ಟ್ ಆಫ್ ಲಿವಿಂಗ್‌ನ ಅನುಯಾಯಿಗಳು ಭಾಗಿಯಾಗಲಿದ್ದಾರೆ.

## ಮುಂಬೈ ವಿಮಾನ ನಿಲ್ದಾಣ ಹಿಂದಿಕ್ಕಿದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

• ಉದಯವಾಹಿನಿ, ದೇವನಹಳ್ಳಿ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ದೇಶದ ಎರಡನೇ ಪ್ರಯಾಣಿಕರ ದಟ್ಟಣೆವುಳ್ಳ ವಿಮಾನ ನಿಲ್ದಾಣವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಹಿಂದಿಕ್ಕಿದೆ. ದೆಹಲಿ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮೊದಲ ಸ್ಥಾನದಲ್ಲಿದೆ. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಬಿಡುಗಡೆ ಮಾಡಿದ ಏಪ್ರಿಲ್ ತಿಂಗಳ ಅಂಕಿ-ಅಂಶದ ಪ್ರಕಾರ, ಕೆಐಎ ಮೂಲಕ ಒಟ್ಟು 31,78,826 ದೇಶಿ ಪ್ರಯಾಣಿಕರು


ಉದಯವಾಹಿನಿ ಚಿತ್ರ

ಹಾರಾಟ ನಡೆಸಿದ್ದಾರೆ. ಮುಂಬೈ ವಿಮಾನ ನಿಲ್ದಾಣದ ಮೂಲಕ 28,93,286 ಮಂದಿ ಪ್ರಯಾಣಿಸಿದ್ದಾರೆ. ಮೊದಲ ಸ್ಥಾನದಲ್ಲಿರುವ ದೆಹಲಿ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ 49,29,982 ಪ್ರಯಾಣಿಕರು ಪ್ರಯಾಣಿಸಿದ್ದಾರೆ.

# ಡಿಜಿಟಲ್ ಆರ್ಥಿಕತೆಯಲ್ಲಿ ವಿಶ್ವದಲ್ಲೇ 5ನೇ ಸ್ಥಾನಕ್ಕೆ ಜಿಗಿದ ಭಾರತ

• ಉದಯವಾಹಿನಿ, ಬೆಂಗಳೂರು

ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ(ಎಐ) ಬಳಕೆಯಲ್ಲಿ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತಲೂ ವೇಗವಾಗಿ ಮುನ್ನುಗ್ಗುತ್ತಿದೆ. ಪ್ರೊಸಸ್ ಸೆಂಟರ್' ಬಿಡುಗಡೆ ಮಾಡಿರುವ 'ಸ್ಟೇಟ್ ಆಫ್ ಇಂಡಿಯಾಸ್ ಡಿಜಿಟಲ್ ಎಕಾನಮಿ' (ಸೈಡ್ 2026) ವರದಿಯು, ಭಾರತದ ಈ ಅದ್ಭುತ ಡಿಜಿಟಲ್ ಕ್ರಾಂತಿಯನ್ನು ಜಗತ್ತಿಗೆ ಪರಿಚಯಿಸಿದೆ.

ಜಾಗತಿಕ ಜಿಡಿಪಿಯಲ್ಲಿ ಶೇ. 96ರಷ್ಟು ಪಾಲು ಹೊಂದಿರುವ ವಿಶ್ವದ 71 ದೇಶಗಳ ಡಿಜಿಟಲ್ ಬೆಳವಣಿಗೆಯನ್ನು ಈ ವರದಿಯಲ್ಲಿ ಪರಾಮರ್ಶೆ ಮಾಡಲಾಗಿದೆ. 2025ರಲ್ಲಿ ಜಾಗತಿಕ ಡಿಜಿಟಲ್ ಆರ್ಥಿಕತೆಯಲ್ಲಿ ಎಂಟನೇ ಸ್ಥಾನದಲ್ಲಿದ್ದ ಭಾರತ, ಕೇವಲ ಒಂದೇ ವರ್ಷದಲ್ಲಿ ಭಾರಿ ಪ್ರಗತಿ ಸಾಧಿಸಿ ಇದೀಗ ಐದನೇ ಸ್ಥಾನಕ್ಕೆ ಜಿಗಿದಿದೆ. ಸಾಫ್ಟ್‌ವೇರ್, ಐಟಿ ಸೇವೆಗಳು ಮತ್ತು ಕ್ಲೌಡ್ ಸಿಸ್ಟಮ್‌ಗಳಂತಹ ಡಿಜಿಟಲ್ ಸೇವೆಗಳನ್ನು ರಫ್ತು ಮಾಡುವಲ್ಲಿ ಭಾರತವು ಮುಂಚೂಣಿಯಲ್ಲಿದ್ದು, ಇದರಿಂದ ಬರೋಬ್ಬರಿ 328 ಬಿಲಿಯನ್ ಡಾಲರ್ (ಸುಮಾರು 31 ಲಕ್ಷ ಕೋಟಿ ರೂ.) ಆದಾಯಗಳಿಸಿದೆ. ಕೃತಕ ಬುದ್ಧಿಮತ್ತೆ



ಉದಯವಾಹಿನಿ ಚಿತ್ರ

ಅಥವಾ ಎಐ ಬಳಕೆಯಲ್ಲಿ ಭಾರತವು ಜಗತ್ತಿನಲ್ಲೇ ನಾಲ್ಕನೇ ಸ್ಥಾನದಲ್ಲಿದೆ. ಕೇವಲ ಅಮೆರಿಕ, ಚೀನಾ ಮತ್ತು ಸಿಂಗಾಪುರ ಮಾತ್ರ ನಮಗಿಂತ ಮುಂದಿವೆ.

ಜರ್ಮನಿ, ಫ್ರಾನ್ಸ್, ಜಪಾನ್, ಯುಕೆ ಮತ್ತು ಕೆನಡಾದಂತಹ ಬಲಿಷ್ಠ ದೇಶಗಳನ್ನೂ ಭಾರತ ಹಿಂದಿಕ್ಕಿರುವುದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ.ಅಮೆರಿಕದ ನಂತರ ಜಗತ್ತಿನ ಅತಿ ಹೆಚ್ಚು 'ಎಐ ಪ್ರತಿಭೆ ಇರುವುದೇ ಭಾರತದಲ್ಲಿ ಪ್ರಪಂಚದಾದ್ಯಂತ ಇರುವ ಒಟ್ಟು ಎಐ ಬಳಕೆದಾರರಲ್ಲಿ ಶೇ. 72 ರಷ್ಟು ಜನರು ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿದ್ದಾರೆ. ಅದರಲ್ಲಿ ಭಾರತ ಮತ್ತು ಚೀನಾ ಪಾಲು ಬರೋಬ್ಬರಿ ಶೇ. 40 ರಷ್ಟಿದೆ. ಈ ಬಗ್ಗೆ ಮತ್ತಷ್ಟು ಮಾಹಿತಿ ಹಂಚಿಕೊಂಡಿರುವ ಅಧ್ಯಕ್ಷ ಪ್ರಮೋದ್ ಭಾಸಿನ್, ಭಾರತವು ಅತ್ಯುತ್ತಮ ಇಂಟರ್‌ನೆಟ್ ಸಂಪರ್ಕ, ಉದ್ಯಮಶೀಲತೆ ಮತ್ತು ಡಿಜಿಟಲ್ ಮೂಲಸೌಕರ್ಯವನ್ನು ನಿರ್ಮಿಸಿದೆ. ಮುಂದಿನ ಹಂತದ ಬೆಳವಣಿಗೆಯು ನಾವು ಎಐ ಅನ್ನು ಎಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತೇವೆ ಮತ್ತು ಸೈಬರ್ ಭದ್ರತೆಯನ್ನು ಹೇಗೆ ಕಾಪಾಡಿಕೊಳ್ಳುತ್ತೇವೆ ಎಂಬುದರ ಮೇಲೆ ಅವಲಂಬಿತವಾಗಿದೆ, ಎಂದರು. ಪ್ರೊಸಸ್ ಸಂಸ್ಥೆಯ ಗ್ರೂಪ್ ಕಾರ್ಪೊರೇಟ್ ಅಫೇರ್ಸ್ ಉಪಾಧ್ಯಕ್ಷ ಸೆಹ್ರಾಜ್ ಸಿಂಗ್ ಪ್ರತಿಕ್ರಿಯಿಸಿ, ಭಾರತವು ಈಗ ಕೇವಲ ಒಂದು ದೊಡ್ಡ ಡಿಜಿಟಲ್ ಮಾರುಕಟ್ಟೆಯಾಗಿ ಉಳಿದಿಲ್ಲ, ಬದಲಾಗಿ ಜಗತ್ತಿನ ಅತ್ಯಂತ ಪ್ರಭಾವಶಾಲಿ ಎಐ ಆರ್ಥಿಕತೆ'ಯಾಗಿ ಹೊರ ಹೊಮ್ಮುತ್ತಿದೆ. ನಾವೀನ್ಯತಾ ಪಾಲುದಾರನಾಗಿ ನಾವು ಭಾರತದ ಡಿಜಿಟಲ್ ಇಕೋ ಸಿಸ್ಟಮ್‌ಗೆ ಬೆಂಬಲ ನೀಡಲಿದ್ದೇವೆ, ಎಂದು ಹೇಳಿದರು.

### ಮುಂದಿರುವ ಸವಾಲುಗಳೇನು?

ಭಾರತವು ಎಐ ಬಳಕೆಯಲ್ಲಿ ವಿಶ್ವದ ಶೇ. 26ರಷ್ಟು ಪಾಲನ್ನು ಹೊಂದಿದ್ದರೂ, ಜಾಗತಿಕ ಮಟ್ಟದ ಖಾಸಗಿ ಎಐ ಹೂಡಿಕೆಯಲ್ಲಿ ಭಾರತದ ಪಾಲು ಕೇವಲ ಶೇ. 1 ರಷ್ಟಿದೆ. ನಮ್ಮಲ್ಲಿ ಪ್ರತಿಭೆಗಳಿದ್ದರೂ, ಅವರಿಗೆ ಬೇಕಾದ ದೊಡ್ಡ ಬಂಡವಾಳ ಮತ್ತು ಹೈ-ಟೆಕ್ ಇನ್ಫ್ರಾಸ್ಟ್ರಕ್ಚರ್ ಕೊರತೆ ಎದ್ದುಕಾಣುತ್ತಿದೆ. ಇದಲ್ಲದೆ, ಡಿಜಿಟಲೈಸೇಶನ್ ವೇಗವಾಗಿ ಬೆಳೆದಂತೆ ಸೈಬರ್ ವಂಚನೆ ಮತ್ತು ಆನ್‌ಲೈನ್ ಹಣಕಾಸು ಅಪರಾಧಗಳು ಕೂಡ ಹೆಚ್ಚಾಗುತ್ತಿವೆ. ಭಾರತವು ಡಿಜಿಟಲ್ ಬೆಳವಣಿಗೆಯ ಜೊತೆಗೆ ಸೈಬರ್ ಭದ್ರತೆ ಮತ್ತು ಪರಿಸರ ಸಂರಕ್ಷಣೆಗೂ ಸಮಾನ ಒತ್ತು ನೀಡಬೇಕಿದೆ ಎಂದು ವರದಿ ಎಚ್ಚರಿಸಿದೆ.

### ಜಾಗತಿಕ ಡಿಜಿಟಲ್ ಆರ್ಥಿಕತೆಯಲ್ಲಿ ಐದನೇ ಸ್ಥಾನ

# ಕೆ.ಹೆಚ್.ಮುನಿಯಪ್ಪರನ್ನು ಉಪಮುಖ್ಯಮಂತ್ರಿ ಮಾಡಿ : ಮಾದಾರ ಮಹಾಸಭಾ ಆಗ್ರಹ

• ಉದಯವಾಹಿನಿ, ಚಿಕ್ಕಬಳ್ಳಾಪುರ


ಉದಯವಾಹಿನಿ ಚಿತ್ರ

ಮಾದಿಗ ಸಮುದಾಯದ ಹಿರಿಯ ಮುಖಂಡರು ಮುಖ್ಯಮಂತ್ರಿ ಸಿದ್ಧರಾಮಯ್ಯ ಕ್ಯಾಬಿನೆಟ್‌ನಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಾಗಿ ಉತ್ತಮವಾಗಿ ಕೆಲಸ ಮಾಡಿದ್ದ ಕೆ.ಹೆಚ್. ಮುನಿಯಪ್ಪ ಅವರನ್ನು ಹೊಸ ಸರಕಾರದಲ್ಲಿ ಉಪಮುಖ್ಯಮಂತ್ರಿ ಮಾಡುವ ಮೂಲಕ ಸಮುದಾಯಕ್ಕೆ ಶಕ್ತಿ ತುಂಬಬೇಕಿದೆ ಎಂದು ಮಾದಾರ ಮಹಾಸಭಾದ ಜಿಲ್ಲಾಧ್ಯಕ್ಷ ಪಟ್ರೇನಹಳ್ಳಿ ಕೃಷ್ಣ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲರನ್ನು ಒತ್ತಾಯಿಸಿದರು. ನಗರದ ಅಂಬೇಡ್ಕರ್ ವೃತ್ತದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮೋಂಬತ್ತಿ ಬೆಳಗಿ ಮಾತನಾಡಿದರು.

ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮಾದಿಗ ಸಮುದಾಯವು 101 ಪರಿಶಿಷ್ಟ ಜಾತಿಗಳಲ್ಲೇ ಅತ್ಯಂತ ಶೋಷಣೆಗೆ ಒಳಗಾದ ಎಲ್ಲಾ ಅವಕಾಶಗಳಿಂದ ಸಮುದಾಯವಾಗಿದೆ. ಹಿಂದೆ ಬಿಜೆಪಿ ಸರಕಾರದಲ್ಲಿ ನಮ್ಮ ಸಮುದಾಯದ ಗೋವಿಂದ ಕಾರಜೋಳ ಅವರನ್ನು ಉಪಮುಖ್ಯಮಂತ್ರಿ ಮಾಡಿ ಸಾಮಾಜಿಕ ನ್ಯಾಯದ ಪರಿಪಾಲನೆ ಮಾಡಲಾಗಿತ್ತು.

ಅಂತೆಯೇ ಕಾಂಗ್ರೆಸ್ ಪಕ್ಷವೂ ಕೂಡ ಮಾದಿಗ ಸಮುದಾಯದ ಕೆಹೆಚ್. ಮುನಿಯಪ್ಪ ಅವರಿಗೆ ಉಪಮುಖ್ಯಮಂತ್ರಿ ಮಾಡುವ ಅವರ ಅಪಾರ ಅನುಭವ ಸಮುದಾಯಕ್ಕೆ ಮತ್ತು ಸರಕಾರಕ್ಕೆ ದಕ್ಕುವಂತೆ ಮಾಡಬೇಕು ಎಂದರು.ಕೆ.ಹೆಚ್. ಮುನಿಯಪ್ಪ ಅವರು ಮಾದಿಗ ಸಮುದಾಯದ ಅಗ್ರಗಣ್ಯ ನಾಯಕರಾಗಿದ್ದಾರೆ. ಕೇಂದ್ರ ಸಚಿವರಾಗಿ, ರಾಜ್ಯದಲ್ಲಿ ಸಚಿವರಾಗಿ, ಸಂಸದರಾಗಿ ಪಕ್ಷನಿಷ್ಟ ಶಿಸ್ತಿನ ಸಿಪಾಯಿಯಾಗಿ ಹೆಸರು ಗಳಿಸಿದ್ದಾರೆ.

ಹೀಗಾಗಿ ಮಾದಾರ ಮಹಾಸಭಾ ಇವರನ್ನು ಉಪಮುಖ್ಯಮಂತ್ರಿ ಮಾಡಬೇಕು ಎಂದು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತದೆ ಎಂದರು.

ಈ ವೇಳೆ ಮಾದಾರ ಮಹಾಸಭಾ ಜಿಲ್ಲಾಧ್ಯಕ್ಷ ಪಟ್ರೇನಹಳ್ಳಿ ಕೃಷ್ಣ, ತಾಲ್ಲೂಕು ಅಧ್ಯಕ್ಷ ಕೊತ್ತನೂರು ಮುನಿಯಪ್ಪ, ಪಿಎಲ್‌ಡಿ ಬ್ಯಾಂಕ್ ಉಪಧ್ಯಕ್ಷ ತಿರುಮಳಪ್ಪ, ಮತ್ತಿತರರು ಇದ್ದರು.


# ಚಾಮರಾಜನಗರದಲ್ಲಿ ಸಚಿವ ಸ್ಥಾನದ ಕೂಗು..

## 500 ಕೋಟಿಗೂ ಅಧಿಕ ಅನುದಾನ ತಂದು ಅಭಿವೃದ್ಧಿ ಕಾರ್ಯ

### ಜಿಲ್ಲೆಗೆ ಮಂತ್ರಿಗಿರಿ ಒಲಿಯುತ್ತದೆಯೇ?

ಕೊಳ್ಳೇಗಾಲದ ಶಾಸಕ ಎ.ಆರ್. ಕೃಷ್ಣಮೂರ್ತಿ ಮೂರನೇ ಬಾರಿ ಶಾಸಕರಾಗಿದ್ದು ಈಗಾಗಲೇ 3 ವರ್ಷದ ಅವಧಿಯಲ್ಲಿ 500 ಕೋಟಿಗೂ ಅಧಿಕ ಅನುದಾನ ತಂದು ಅಭಿವೃದ್ಧಿ ಕಾರ್ಯ ನಡೆಸುತ್ತಿದ್ದಾರೆ. ದಲಿತ ಸಮುದಾಯದ ಶಾಸಕರಾಗಿದ್ದು ಇವರಿಗೆ ಮಂತ್ರಿ ಸ್ಥಾನ ನೀಡಬೇಕು ಎಂಬ ಕೂಗು ಹೆಚ್ಚಾಗಿದೆ.

ಈ ಸಲ ಸಚಿವ ಸಂಪುಟದಲ್ಲಿ ಗಡಿಜಿಲ್ಲೆಗೆ ಅವಕಾಶ ದೊರೆಯುವುದೇ ಎನ್ನುವ ಕುತೂಹಲ ಮನೆ ಮಾಡಿದೆ. ಪಕ್ಷದ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಎಚ್.ಎಂ.ಗಣೇಶ್‌ಪ್ರಸಾದ್ ವರಿಷ್ಠರು, ನಾಯಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಸಿ.ಪುಟ್ಟರಂಗಶೆಟ್ಟಿ ಮತ್ತು ಎ.ಆರ್. ಕೃಷ್ಣಮೂರ್ತಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂಬ ಕೂಗು ದಿನದಿಂದ ದಿನಕ್ಕೆ ಜೋರಾಗುತ್ತಿದೆ. ಹಾಗಾಗಿ ಜಿಲ್ಲೆಗೆ ಮಂತ್ರಿಗಿರಿ ಒಲಿಯುತ್ತದೆಯೇ?, ಇಬ್ಬರಲ್ಲಿ ಯಾರಿಗೆ ಅವಕಾಶ ಸಿಗಬಹುದು ಎನ್ನುವ ಚರ್ಚೆಗಳು ಹೆಚ್ಚಾಗಿದೆ.


ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಾಮರಾಜನಗರ

ಹಳೇ ಮೈಸೂರು ಭಾಗದ ಹಾಗೂ ದಲಿತರು, ಹಿಂದುಳಿದ ವರ್ಗಗಳ ಮತಗಳು ಹೆಚ್ಚಿರುವ ಚಾಮರಾಜನಗರ ಜಿಲ್ಲೆಗೆ ಈ ಬಾರಿ ಸಚಿವ ಸ್ಥಾನ ಒಲಿದು ಬರುವ ನಿರೀಕ್ಷೆ ಜೋರಾಗಿದೆ. ಮುಖ್ಯಮಂತ್ರಿ ಬದಲಾವಣೆಯಾದ ಬೆನ್ನಲ್ಲೇ ಚಾಮರಾಜನಗರದಲ್ಲಿ ಸಚಿವಗಿರಿಗಾಗಿ ಒತ್ತಾಯದ ಕೂಗು ಜೋರಾಗಿದೆ. ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಮತ್ತು ಎಂಎಸ್‌ಐಎಲ್ ಅಧ್ಯಕ್ಷ ಸಿ. ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಬೇಕು ಎಂದು ಅವರ ಬೆಂಬಲಿಗರು ಒತ್ತಾಯ ಮಾಡುತ್ತಿದ್ದಾರೆ.

ಮತ್ತೊಂದೆಡೆ ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರಿಗೆ ಮಂತ್ರಿಗಿರಿ ನೀಡಬೇಕು ಎಂದು ಅವರ ಅಭಿಮಾನಿಗಳು ಆಗ್ರಹಿಸುತ್ತಿದ್ದಾರೆ.

ಅದೇ ರೀತಿ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರಿಗೂ ಸಚಿವ ಸ್ಥಾನ ನೀಡಬೇಕು ಎಂಬ ಒತ್ತಾಯಗಳು ಆಗಲೇ ಕೇಳಿ ಬಂದಿದ್ದವು. ರಾಗಿ ಹೊಲದಿಂದ ರಾಜಭವನದವರೆಗೆ ಸಾಗಿದ ಮಾಜಿ ರಾಜ್ಯಪಾಲರಾದ ದಿ.ಬಿ.ರಾಚಯ್ಯ ಸಿಎಂ ಸಿದ್ದರಾಮಯ್ಯ ಅವರ ಗುರುಗಳಾಗಿದ್ದು, ಇವರ ಮಗನಾದ ಎ.ಆರ್.ಕೃಷ್ಣಮೂರ್ತಿ ಅವರಿಗೆ ಸಚಿವ ಸ್ಥಾನ ದೊರೆಯುತ್ತದೆ ಎಂದು ಆಗ ಅಂದಾಜು ನಡೆಯುತ್ತಿತ್ತು. ಆದರೆ, ಇಬ್ಬರು ಶಾಸಕರಲ್ಲಿ ಒಬ್ಬರಿಗೂ ಅವಕಾಶ ಸಿಗದ ಕೊರತೆ ಜಿಲ್ಲೆಯ ಪಾಲಿಗೆ ಉಳಿದುಬಿಟ್ಟಿದೆ. ಪ್ರಸ್ತುತ ರಾಜ್ಯ ಸರ್ಕಾರದಲ್ಲಿ ಸಿಎಂ ಬದಲಾವಣೆಯಿಂದ ಮತ್ತೆ ಸಚಿವ ಸ್ಥಾನ ಕೇಳಲು ಅವಕಾಶ ಸಿಕ್ಕಿದೆ. ಆದರೆ, ಈ ಇಬ್ಬರೂ ಅನುಭವಿ ರಾಜಕಾರಣಿಗಳಲ್ಲಿ ಪಕ್ಷ ಯಾರಿಗೆ ಮಣೆ ಹಾಕುತ್ತದೆ ಎಂಬುದಕ್ಕೆ ಕಾಲವೇ ತೀರ್ಮಾನ ಮಾಡಲಿದೆ. ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಪಂಚಾಯಿತಿಯಿಂದ ವಿಧಾನಸೌಧದವರೆಗೆ ಬಂದಿರುವ ರಾಜಕಾರಣಿ. ಸತತ ನಾಲ್ಕು ಬಾರಿ ಶಾಸಕರಾಗಿ ಒಮ್ಮೆ ಸಚಿವರಾಗಿರುವ ಹಿರಿಯ ಶಾಸಕರಾಗಿದ್ದಾರೆ. ರಾಜ್ಯದ ಉಪ್ಪಾರ ಸಮುದಾಯದ ಏಕೈಕ ಶಾಸಕರಾಗಿದ್ದಾರೆ.

### ಗಡಿಜಿಲ್ಲೆಗೆ ಈ ಬಾರಿ ಸಿಗತ್ತಾ ಸಚಿವಗಿರಿ: ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ ಪ್ರಬಲ ಲಾಬಿ

### ಎ.ಆರ್.ಕೆ. ಪೋಸ್ಟರ್ ಹಿಡಿದು ರ‍್ಯಾಲಿ

ಯಳಂದೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಎ.ಆರ್. ಕೃಷ್ಣಮೂರ್ತಿ ಅಭಿಮಾನಿಗಳು ಎಆರ್ ಕೆ ಪೋಸ್ಟರ್ ಹಿಡಿದು ಸಚಿವ ಸ್ಥಾನ ನೀಡುವಂತೆ ರ‍್ಯಾಲಿ ನಡೆಸಿದ್ದಾರೆ. ಯಳಂದೂರಿನ ಕಾಂಗ್ರೆಸ್ ಕಚೇರಿ, ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಜಮಾಯಿಸಿದ ಅಭಿಮಾನಿಗಳು ಎ.ಆರ್. ಕೃಷ್ಣಮೂರ್ತಿ ಪರ ಜಯಘೋಷ ಕೂಗಿ ಮಂತ್ರಿ ಸ್ಥಾನ ಕೊಡಲೇಬೇಕು ಎಂದು ಒತ್ತಾಯಿಸಿದ್ದಾರೆ. ಅದೇ ರೀತಿ ಚಾಮರಾಜನಗರ ಶಾಸಕ ಪುಟ್ಟರಂಗಶೆಟ್ಟಿ ಪರ ಹಿಂದುಳಿದ ವರ್ಗಗಳ ಒಕ್ಕೂಟ, ಸಂಘಟನೆಗಳು ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದ್ದಾರೆ.

ಪುಟ್ಟರಂಗಶೆಟ್ಟಿ ಬೆಂಬಲಿಗರು ಒತ್ತಾಯ

### ಹಿಂದುಳಿದ ಸಮುದಾಯ ಆಗ್ರಹ

ಚಾಮರಾಜನಗರ ಕ್ಷೇತ್ರದ ಶಾಸಕ ಪುಟ್ಟರಂಗ ಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ದೇವಾಂಗ ಸಮುದಾಯದ ಮುಖಂಡ ಅಚ್ಚಾಲ್ ನಾಗರಾಜಯ್ಯ ಆಗ್ರಹಿಸಿದರು. ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಹಿಂದುಳಿದ ಜನಾಂಗದ ಪರವಾಗಿ ಒತ್ತಾಯಿಸುತ್ತಿದ್ದೇವೆ’ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.ರಾಜ್ಯದಲ್ಲಿ ಉಪ್ಪಾರ ಸಮುದಾಯದ ಏಕೈಕ ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಅವಕಾಶ ನೀಡಲೇಬೇಕು. ಈ ಹಿಂದೆ ಸಚಿವರಾಗಿ, ಎಂಎಸ್‌ಐಎಲ್ ನಿಗಮದ ಅಧ್ಯಕ್ಷರಾಗಿ ಅನೇಕ ಜನಪರ ಕೆಲಸ ಮಾಡಿದ್ದಾರೆ. ಆದ್ದರಿಂದ ಅವರಿಗೆ ಉನ್ನತ ಮಟ್ಟದ ಸಚಿವ ಸ್ಥಾನ ನೀಡಬೇಕು’ ಎಂದು ಆಗ್ರಹಿಸಿದರು.ಉಪ್ಪಾರ ನಿಗಮ ಮಾಜಿ ಅಧ್ಯಕ್ಷ ಶಿವಕುಮಾರ್ ಮಾತನಾಡಿದರು.

# ಬಂಗಾರಪೇಟೆ: ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

• ಉದಯವಾಹಿನಿ, ಬಂಗಾರಪೇಟೆ


ಉದಯವಾಹಿನಿ ಚಿತ್ರ

ನಗರದ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದ ಸಭಾಂಗಣದಲ್ಲಿ ಈಚೆಗೆ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಈ ವೇಳೆ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪಾರ್ಥಸಾರಥಿ ಮಾತನಾಡಿ, ಸರ್ಕಾರದ ಗ್ಯಾರಂಟಿ ಯೋಜನೆಗಳು ಯಾವುದೇ ರೀತಿಯಲ್ಲಿ ದುರುಪಯೋಗವಾಗದಂತೆ, ಶ್ರಮವಹಿಸಿ ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಪಂಚ ಗ್ಯಾರಂಟಿ ಯೋಜನೆಗಳು ಬಡವರು ಮತ್ತು ಮಧ್ಯಮ ವರ್ಗದವರ ಬಾಳಿಗೆ ಆಸರೆಯಾಗಿವೆ. ಈ ಯೋಜನೆಗಳ ಲಾಭವನ್ನು ಅರ್ಹ ನಾಗರಿಕರು ಪಡೆಯಬಹುದು. ಗ್ಯಾರಂಟಿ ಅನುಷ್ಠಾನದಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಗೃಹಲಕ್ಷ್ಮಿ ಯೋಜನೆಯಡಿ ನೋಂದಾಯಿಸಿಕೊಂಡಿದ್ದ ಕೆಲವು ಮಹಿಳೆಯರು ಮರಣ ಹೊಂದಿದ್ದರೂ, ತಾಂತ್ರಿಕ ಕಾರಣಗಳಿಂದ ಅಥವಾ ಮಾಹಿತಿ ಕೊರತೆಯಿಂದ ಅವರ ಖಾತೆಗಳಿಗೆ ತಿಂಗಳ 2 ಸಾವಿರ ಪಾವತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ತಡೆಗಟ್ಟಲು ಮತ್ತು ಅರ್ಹರಿಗೆ ಮಾತ್ರ ಯೋಜನೆಯ ಲಾಭ ಸಿಗುವಂತೆ ಮಾಡಲು ಗೃಹಲಕ್ಷ್ಮಿ ಹಾಗೂ ಗೃಹಜ್ಯೋತಿ ಯೋಜನೆಗಳಲ್ಲಿ ಮಹತ್ವದ ಬದಲಾವಣೆಗಳನ್ನು ತರಲು ಸರ್ಕಾರ ಚಿಂತನೆ ನಡೆಸಿದೆ. ಲೋಪದೋಷಗಳನ್ನು ಸರಿಪಡಿಸಲು ಸರ್ಕಾರ ಶೀಘ್ರದಲ್ಲೇ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಲಿದೆ. ಆ ಬಳಿಕ ಎಲ್ಲಾ ಅರ್ಹ ಫಲಾನುಭವಿಗಳು ಕಡ್ಡಾಯವಾಗಿ ಮತ್ತೊಮ್ಮೆ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ ಎಂದರು.

## ಡಿಕೆಶಿ ಸಿ.ಎಂ ಆಗಲೆಂದು ಹರಕೆ: 3 ವರ್ಷದಿಂದ ಗಡ್ಡ-ಕೂದಲು ತೆಗೆಸದ ಅಭಿಮಾನಿ

• ಉದಯವಾಹಿನಿ, ಕನಕಪುರ

ರಾಮನಗರ: ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲೆಂದು ಹರಕೆ ಹೊತ್ತಿರುವ ಅವರ ಕಟ್ಟಾ ಅಭಿಮಾನಿಯೊಬ್ಬರು ಕಳೆದ ಮೂರು ವರ್ಷಗಳಿಂದ ತಮ್ಮ ಗಡ್ಡ ಮತ್ತು ಕೂದಲು ತೆಗೆಸದೆ ಹಾಗೆಯೇ ಬಿಟ್ಟಿದ್ದಾರೆ. ಹಾರೋಹಳ್ಳಿ ತಾಲ್ಲೂಕಿನ ಚಿಕ್ಕಸಾದೇನಹಳ್ಳಿಯ ಈಶ್ವರಪ್ಪ ತಮ್ಮ ನಾಯಕನಿಗಾಗಿ ಹರಕೆ ಹೊತ್ತವರು.

ಕೆಪಿಸಿಸಿ ಅಧ್ಯಕ್ಷರೂ ಆಗಿದ್ದ ಡಿಕೆಶಿ ಅವರು 2023ರ ವಿಧಾನಸಭಾ ಚುನಾವಣೆ ಫಲಿತಾಂಶದ ಬಳಿಕ ಮುಖ್ಯಮಂತ್ರಿ ಆಗಲಿದ್ದಾರೆಂಬ ಭಾರೀ ನಿರೀಕ್ಷೆ ಇತ್ತು. ಈಶ್ವರಪ್ಪ ಸಹ ತಮ್ಮ ನಾಯಕನನ್ನು ಸಿ.ಎಂ ಆಗಿ ನೋಡುವ ಕನಸು ಕಂಡಿದ್ದರು.. ಈಶ್ವರಪ್ಪ ಅವರು, ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವವರೆಗೆ ನಾನು ತಲೆ ಕೂದಲು ಮತ್ತು ಗಡ್ಡ ತೆಗೆಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದರು.

## ಶಾಸಕ ಗಣೇಶ್ ಪ್ರಸಾದ್ಗೆ ಸಚಿವ ಸ್ಥಾನಕ್ಕಾಗಿ ಅಭಿಮಾನಿಗಳಿಂದ ವಿಶೇಷ ಪೂಜೆ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ಶಾಸಕ ಹೆಚ್. ಎಂ ಗಣೇಶ್ ಪ್ರಸಾದ್ಗೆ ನೂತನ ಸಚಿವ ಸಂಪುಟದಲ್ಲಿ ಸ್ಥಾನಮಾನಗಳು ಸಿಗಲಿ ಎಂದು ಕೋರಿ ದಲಿತ ಮುಖಂಡರು ಹಾಗೂ ಅಭಿಮಾನಿಗಳು ಚಿಕ್ಕಮ್ಮದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಗುಂಡ್ಲುಪೇಟೆ ವಿಧಾನ ಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರೂ ಅಭಿವೃದ್ಧಿ ಕೆಲಸಗಳಿಂದ ಮತದಾರರ ಪ್ರೀತಿಗೆ ಪಾತ್ರರಾಗಿದ್ದಾರೆ, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿರುವ ಅವರು ಎಲ್ಲಾ ಸಮುದಾಯದವರನ್ನು ಒಟ್ಟಿಗೆ ಕರೆದೊಯ್ಯುವಲ್ಲಿ ಯಶಸ್ವಿಯಾಗಿದ್ದು ಸರ್ಕಾರದ ಮಟ್ಟದಲ್ಲಿ ಮುಖ್ಯಮಂತ್ರಿ ಹಾಗೂ ಇಲಾಖಾವಾರು ಸಚಿವರ ವಿಶ್ವಾಸಗಳಿಸಿ ಜನಪರ ಕಾರ್ಯಕ್ರಮಗಳನ್ನ ಜಾರಿಗೊಳಿಸುವಲ್ಲಿ ಸಫಲತೆ ಕಂಡಿದ್ದಾರೆ ಹಾಗಾಗಿ ಸಚಿವ ಸ್ಥಾನ ನೀಡಿದ್ದೆಯಾದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಮತ್ತಷ್ಟು ಬಲ ಸಿಕ್ಕಂತಾಗುತ್ತದೆ ಎಂದು ಪುರಸಭಾ ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ ತಿಳಿಸಿದರು.

ಹಳೆ ಮೈಸೂರು ಭಾಗದ ಏಕೈಕ ಲಿಂಗಾಯತ ಶಾಸಕರಾಗಿರುವ ಗಣೇಶ್ ಪ್ರಸಾದ್ ಅವರ ಕಾರ್ಯವೈಖರಿಯನ್ನ ಕಂಡು ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಅವರೇ ಮೆಚ್ಚಿ ಕೊಂಡಾಡಿದ್ದರು. ಕೆಲ ದಿನಗಳ ಹಿಂದಷ್ಟೇ ಸಿಎಂ, ಡಿಸಿಎಂ ಸಚಿವರುಗಳನ್ನ ಗುಂಡ್ಲುಪೇಟೆಗೆ ಆಹ್ವಾನಿಸಿ 600 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದ್ದನ್ನ ಇಲ್ಲಿ ಸ್ಮರಿಸಬಹುದು , ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಇಚ್ಛಾಶಕ್ತಿ ಹೊಂದಿರುವ ಗಣೇಶ್ ಪ್ರಸಾದ್ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಅವಕಾಶ ಸಿಗಲಿ ಎಂದು ಒತ್ತಾಯಿಸಿ ಕೋರಿಕೆ ಫಲಿಸಲಿ ಎಂದು ಶಕ್ತಿದೇವತೆ ಚಿಕ್ಕಮ್ಮದೇವಿಗೆ ಕೋರಿಕೆಯರ್ಪಣೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಈ ಸಂಧರ್ಭದಲ್ಲಿ ಶ್ರೀನಿವಾಸ್ ಪಾಳ್ಯ, ಮದ್ದಯ್ಯನಹುಂಡಿ ಸಿದ್ದರಾಜು, ಲಕ್ಕೂರು ಗಿರೀಶ್ , ಭೀಮನಭೀಡು ಮಲ್ಲಿಕಾರ್ಜುನ್ ಇದ್ದರು.

# ಮಾಜಿ ಶಾಸಕ ಕೆ.ರಾಜು ಪರ ಕಾಂಗ್ರೆಸ್ ಮುಖಂಡರ ಬ್ಯಾಟಿಂಗ್

## ಶಾಸಕರಾಗಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದರೆ ಅದನ್ನು ಜನರ ಮುಂದಿಡಲಿ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಜೆಡಿಎಸ್ ಮುಖಂಡರು ಮಾತನಾಡುವ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ರಾಜು ಅವರ ಬಗ್ಗೆ ಹಗುರವಾಗಿ ಮಾತನಾಡಿರುವುದು ಸರಿಯಲ್ಲ ಎಂದು ತಾಪಂ ಮಾಜಿ ಸದಸ್ಯ ಅಶ್ವತ್ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮನಗರದಲ್ಲಿ ಜೆಡಿಎಸ್ ಪಕ್ಷ ಕಟ್ಟಲು ಕೆ.ರಾಜು ಹಗಲಿರುಳು ಕಷ್ಟಪಟ್ಟು ತಮ್ಮ ಆಸ್ತಿಯನ್ನು ಮಾರಿಕೊಂಡು ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದಾರೆ. ಎಚ್‌ಡಿಕೆ ಅವರು ಸಿಎಂ ಆಗಲು ಕೆ.ರಾಜು ಅವರ ಶ್ರಮ ಎಷ್ಟು ಎಂದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ ಎಂದು ಹೇಳಿದರು. ಜನರು ಮತ ನೀಡದೆ ನಿಖಿಲ್ ಕುಮಾರಸ್ವಾಮಿ ಅವರು ಸೋತರು. ಆದರೆ ಮುಖಂಡರು, ಕಾರ್ಯಕರ್ತರು ಪ್ರಾಮಾಣಿಕವಾಗಿ ಕೆಲಸ ಮಾಡಿದರು. ಇಷ್ಟಾದರೂ ಸಹ ಎಚ್‌ಡಿಕೆ ಅವರು ಕಾರ್ಯಕರ್ತರ ಮೇಲೆ ಅಸಮಾಧಾನ ವ್ಯಕ್ತಪಡಿಸಿದಾಗಲು ಬೇಜಾರು ಮಾಡಿಕೊಳ್ಳದೆ ಪಕ್ಷದ ಹಿತಕ್ಕೆ ದುಡಿಯುತ್ತಿದ್ದಾರೆ. ಆದರೆ ಇತ್ತೀಚೆಗೆ ಕೆಲವು ಮುಖಂಡರು ಲಘುವಾಗಿ ಮಾತನಾಡುತ್ತಿರುವುದು ಸರಿಯಲ್ಲ ಎಂದರು.ಕೆ.ರಾಜು ಅವರು ಶಾಸಕರಾಗಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದರೆ ಅದನ್ನು ಜನರ ಮುಂದಿಡಲಿ. ಇದನ್ನು ಬಿಟ್ಟು ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ. ಆಪರೇಷನ್ ಕಮಲ ನಡೆದಾಗ ಹಣ ಹಾಗೂ ಮಂತ್ರಿ ಗಿರಿ ಆಫರ್ ಬಂದರು ಅವರು ಪಕ್ಷಕ್ಕೆ ನಿಷ್ಠರಾಗಿದ್ದರು ಎಂಬುದನ್ನು ಜೆಡಿಎಸ್ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹೇಳಿದ ಅವರು, ಪಕ್ಷದಲ್ಲಿ ನಿಷ್ಠಾಂತರಿಗೆ ಟಿಕೇಟ್ ನೀಡಿ ಅದರ ಹಿಂದೆ ಅವರ ಸೋಲಿಗೆ ಚಿತಾವಣೆ ನಡೆಸಿರುವ ಬಗ್ಗೆ ಚಾಮುಂಡೇಶ್ವರಿ ದೇವಾಲಯದ ಮುಂದೆ ಪ್ರಮಾಣ ಮಾಡಲು ಸಿದ್ಧ ಎಂದು ಸವಾಲು ಹಾಕಿದರು.

ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್ ಮಾತನಾಡಿ, 2016 ರಲ್ಲಿ ನಡೆದ ಜಿಪಂ ಮತ್ತು ತಾಪಂ ಚುನಾವಣೆ ಸಂದರ್ಭದಲ್ಲಿ ಕೈಲಾಂಚ ಹೋಬಳಿ ವ್ಯಾಪ್ತಿಯಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಸೋಲಿಸಲು ಪ್ರಯತ್ನ ನಡೆಸಿಲ್ಲ ಎನ್ನುವುದಾದರೆ ದೇವರ ಮುಂದೆ ಎಚ್‌ಡಿಕೆ ಪ್ರಮಾಣ ಮಾಡಲಿ ಎಂದು ಕಿಡಿಕಾರಿದ ಅವರು ಪ್ರಾಮಾಣಿಕವಾಗಿ ಕೆಲಸ ಮಾಡಿದವರಿಗೆ ಎಂದಿಗೂ ಬೆಲೆ ಕೊಡಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಾಧಿಕಾರದ ಮಾಜಿ ಅಧ್ಯಕ್ಷ ರಾಜಶೇಖರ್, ಮುಖಂಡ ಮಂಚೇಗೌಡ, ತಾಪಂ ಮಾಜಿ ಅಧ್ಯಕ್ಷ ಜಗದೀಶ್, ಬೈರಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

# ಬಿಡದಿ: ಟೌನ್‌ಶಿಪ್ ವಿರೋಧಿಸಿ ಪ್ರತಿಭಟನೆ

• ಉದಯವಾಹಿನಿ, ಬಿಡದಿ



ಉದಯವಾಹಿನಿ ಚಿತ್ರ

ಬೈರಮಂಗಲ ಟೌನ್‌ಶಿಪ್ ಯೋಜನೆ ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಅಖಿಲ ಭಾರತ ಕಿಸಾನ್ ಸಭಾ ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಮತ್ತು ರೈತರು ಮೆರವಣಿಗೆ ನಡೆಸಿದರು. ಅಬ್ಬನಕುಪ್ಪೆ ಬಿಎಂಟಿಸಿ ಡಿಪೊ ಬಳಿಯಿಂದ ಯಾತ್ರೆ ಮೂಲಕ ಪ್ರಾರಂಭವಾದ ಮೆರವಣಿಗೆ ಬೈರಮಂಗಲ ವೃತ್ತದವರೆಗೆ ನಡೆಯಿತು. ಸುಮಾರು 3 ಕಿ.ಮೀವರೆಗೆ ಕಾರ್ಯಕರ್ತರು ಕೆಂಪು ಮತ್ತು ಹಸಿರು ಬಾವುಟ ಹಿಡಿದು ಹೆಜ್ಜೆ ಹಾಕಿದರು. ಸರ್ಕಾರ ರೈತರ ಪ್ರತಿಭಟನೆಗೆ ಬೆಲೆ ನೀಡದೆ ಸರ್ವಾಧಿಕಾರಿ ರೀತಿಯಲ್ಲಿ ವರ್ತಿಸುತ್ತಿದೆ. ಬಡ ರೈತರು ಹಾಗೂ ಕೂಲಿ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು. ಟೌನ್‌ಶಿಪ್ ಯೋಜನೆಯು ರಿಯಲ್ ಎಸ್ಟೇಟ್ ಹಿತಾಸಕ್ತಿಯ ಕಾರ್ಪೋರೇಟ್ ಭೂ ಕಬಳಿಕೆ ಉದ್ದೇಶವಾಗಿದೆ. ಇದನ್ನು ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟ ಕೇವಲ ಭೂಮಿಗಾಗಿ ನಡೆಸುತ್ತಿರುವ ಹೋರಾಟವಾಗದೆ ಇಡೀ ದೇಶದ ಆಹಾರ ಭದ್ರತೆ ಹಾಗೂ ಕೃಷಿ ಉಳಿವಿಗಾಗಿ ಮತ್ತು ಜೀವ ಪರಿಸರ ಸುಸ್ತಿರಕ್ಕಾಗಿ ನಡೆಸುತ್ತಿರುವ ಹೋರಾಟವಾಗಿದೆ. ಸರ್ಕಾರ ಯೋಜನೆ ಕೈಬಿಡುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ವರಲಕ್ಷ್ಮಿ ಮಾತನಾಡಿ, ಸರ್ಕಾರ ಅಭಿವೃದ್ಧಿ ಹೆಸರಿನಲ್ಲಿ ರೈತರ ಘನತೆ ಮತ್ತು ಸಮಾನತೆ ಬದುಕಿಗೆ ಕೊಳ್ಳಿ ಇಡುವ ಕೆಲಸ ಮಾಡುತ್ತಿದೆ. ಅಭಿವೃದ್ಧಿ ಜನರಿಗಾಗಿ ಇರಬೇಕು. ಆದರೆ, ಸರ್ಕಾರ ರೈತರನ್ನು ದೂರವಿಟ್ಟು ಬಂಡವಾಳಶಾಹಿ ಅಭಿವೃದ್ಧಿ ಮಾಡಲು ಹೊರಟಿದೆ ಎಂದು ಟೀಕಿಸಿದರು. ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿ ಹೆಸರಿನಲ್ಲಿ ರಾಜ್ಯ ಸರ್ಕಾರ ಕೆಐಎಡಿಬಿ ಮೂಲಕ ರಾಜ್ಯದಲ್ಲಿ 1 ಲಕ್ಷ 62 ಸಾವಿರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ. ಇದರಲ್ಲಿ ಸಾಕಷ್ಟು ಭೂಮಿ ಖಾಲಿ ಬಿದ್ದಿದೆ. ಅಭಿವೃದ್ಧಿ ಹೆಸರಿನಲ್ಲಿ ಬೈರಮಂಗಲ-ಕಂಚುಗಾರನಹಳ್ಳಿ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಹೊಸ ಅಧಿಸೂಚನೆ ಏಕೆ ಹೊರಡಿಸುತ್ತಿದ್ದೀರಿ ಎಂದು ಪ್ರಶ್ನಿಸಿದರು. ಕರ್ನಾಟಕ ಪ್ರಾಂತ ರೈತಸಂಘ ರಾಜ್ಯ ಘಟಕದ ಅಧ್ಯಕ್ಷ ಯು.ಬಸವರಾಜು, ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ್, ಸಹ ಕಾರ್ಯದರ್ಶಿ ಎನ್.ಭರತ್ ರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಎಲ್.ಅಂಕಪ್ಪ, ರೈತ ಹೋರಾಟಗಾರ್ತಿ ಪ್ರಭಾ ಬೆಳವಾಡಿ, ಬೈರಮಂಗಲ ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ರೈತರ ಭೂ ಹಿತರಕ್ಷಣಾ ಸಂಘದ ಅಧ್ಯಕ್ಷ ರಾಮಯ್ಯ ,ಮುಖಂಡರಾದ ಪ್ರಕಾಶ್, ನಾಗರಾಜು, ನಾಗೇಶ್ ಶ್ರೀನಿವಾಸರೆಡ್ಡಿ, ಕೃಷ್ಣ, ಮಂಜುನಾಥ್, ಕುಮಾರಸ್ವಾಮಿ, ಚೀಲೂರು ಮುನಿರಾಜು, ರೈತ ಮಹಿಳೆಯರಾದ ಭಾಗ್ಯ ನಾಗರಾಜು, ಜಯಮ್ಮ, ಸುಮಾ ಮತ್ತಿತರರು ಭಾಗವಹಿಸಿದ್ದರು.

### ಸರ್ಕಾರಕ್ಕೆ ರೈತರ ಸಂಕಷ್ಟ ಗೊತ್ತಾಗುತ್ತಿಲ್ಲ

ಬೈರಮಂಗಲ ಮತ್ತು ಹೊಸೂರು ವೃತ್ತದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡಿದ ಅಖಿಲ ಭಾರತ ಕಿಸಾನ್ ಸಭಾ ರಾಷ್ಟ್ರೀಯ ಸಹ ಕಾರ್ಯದರ್ಶಿ ಡಿ.ರವಿಂದ್ರನ್, ಕಳೆದ 438 ದಿನಗಳಿಂದ ರೈತರು ರಾತ್ರಿ ಹಗಲು ಎನ್ನದೆ ಹೋರಾಟ ನಡೆಸುತ್ತಿದ್ದಾರೆ. ಪಂಚೇಂದ್ರಿಯಗಳನ್ನು ಕಳೆದುಕೊಂಡಿರುವ ರಾಜ್ಯ ಸರ್ಕಾರಕ್ಕೆ ರೈತರ ಸಂಕಷ್ಟ ಗೊತ್ತಾಗುತ್ತಿಲ್ಲ. ಈ ಸರ್ಕಾರವನ್ನು ಎಚ್ಚರಿಸಲು ಹೋರಾಟವನ್ನು ಬೈರಮಂಗಲ ವೃತ್ತದಿಂದ ವಿಧಾನಸೌಧಕ್ಕೆ ಸ್ಥಳಾಂತರ ಮಾಡೋಣ ಎಂದು ಹೇಳಿದರು.



## ಮಿನಿ ನ್ಯೂಸ್

### ಮಾಜಿ ಸಚಿವ ವೆಂಕಟರಮಣಪ್ಪ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ

• ಉದಯವಾಹಿನಿ, ಪಾವಗಡ

ಹೃದಯಾಘಾತದಿಂದ ನಿಧನರಾದ ಮಾಜಿ ಸಚಿವ ವೆಂಕಟರಮಣಪ್ಪ (80) ಅವರ ಅಂತಿಮ ದರ್ಶನಕ್ಕೆ ಪಟ್ಟಣದ ಗುರುಭವನ ಮೈದಾನದಲ್ಲಿ ಶುಕ್ರವಾರ ವ್ಯವಸ್ಥೆ ಮಾಡಲಾಗಿತ್ತು. ವಿವಿಧ ರಾಜಕೀಯ ಮುಖಂಡರು, ಅಧಿಕಾರಿಗಳು, ಸಾರ್ವಜನಿಕರು ಹಾಗೂ ಅಭಿಮಾನಿಗಳು ಸೇರಿ ಸಾವಿರಾರು ಮಂದಿ ಆಗಮಿಸಿ ಅಂತಿಮ ನಮನ ಸಲ್ಲಿಸಿದರು. ಕಿರಿಯ ಪುತ್ರ ಸ್ಥಳೀಯ ಶಾಸಕ ಎಚ್.ವಿ.ವೆಂಕಟೇಶ ಅವರು ಮಾತನಾಡಿ, ತಂದೆಯವರ ಅಗಲಿಕೆಯಿಂದ ತಾಲೂಕಿನ ಜನರಿಗೆ ಬಾರಿ ನಷ್ಟ ಉಂಟಾಗಿದೆ. ಜನರು ಅರ್ಧ ರಾತ್ರಿಯಲ್ಲಿ ಸಮಸ್ಯೆ ಹೇಳಿಕೊಂಡು ಬಂದರೂ ಸ್ಪಂದಿಸುವ ಕೆಲಸವನ್ನು ಮಾಡಿದ್ದಾರೆ. ನಾಳೆ ಸ್ವಗ್ರಾಮದ ಹನುಮಂತನಹಳ್ಳಿಯಲ್ಲಿ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ತಿಳಿಸಿದ್ದಾರೆ. ತಾಲ್ಲೂಕಿನ ಹನುಮಂತನಹಳ್ಳಿ ಗ್ರಾಮದ ಹಿರಿಯ ರಾಜಕೀಯ ನಾಯಕ ಹಾಗೂ ಮಾಜಿ ಸಚಿವ ವೆಂಕಟರಮಣಪ್ಪ (80) ಹೃದಯಾಘಾತದಿಂದ ಜಾವ ನಿಧನರಾಗಿದ್ದಾರೆ.

### ಸಾಕರಸನಹಳ್ಳಿ ಅಂಗನವಾಡಿ ಕೇಂದ್ರ: ಅರ್ಹತೆ ಇಲ್ಲದ ವ್ಯಕ್ತಿಗೆ ಪದೋನ್ನತಿ

• ಉದಯವಾಹಿನಿ, ಬಂಗಾರಪೇಟೆ



ಉದಯವಾಹಿನಿ ಚಿತ್ರ

ತಾಲ್ಲೂಕಿನ ಸಾಕರಸನಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಕಳೆದ ಆರು ತಿಂಗಳಿನಿಂದ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಹುದ್ದೆ ಭರ್ತಿ ಪ್ರಕ್ರಿಯೆಯು ಇದೀಗ ವಿವಾದಕ್ಕೆ ಕಾರಣವಾಗಿದೆ.

ಸರ್ಕಾರದ ನಿಯಮಾವಳಿ ಗಾಳಿಗೆ ತೂರಿ, ಅರ್ಹತೆ ಇಲ್ಲದ ವ್ಯಕ್ತಿಗೆ ಪದೋನ್ನತಿ ನೀಡಲು ಅಧಿಕಾರಿಗಳು ಶಾಮೀಲಾಗಿ ಅಂಗನವಾಡಿ ಕಾರ್ಯಕರ್ತೆಯನ್ನು ನೇಮಿಸಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಸರ್ಕಾರದ ನಿಯಮಾವಳಿಗಳ ಪ್ರಕಾರ, ಪಕ್ಕದ ಗ್ರಾಮದ ಅಂಗನವಾಡಿ ಸಹಾಯಕಿಯೊಬ್ಬರನ್ನು ಕಾರ್ಯಕರ್ತೆಯಾಗಿ ಪದೋನ್ನತಿ ಪಡೆಯಬೇಕಾದರೆ, ಅವರು ಕನಿಷ್ಠ 5 ವರ್ಷಗಳ ನಿರಂತರ ಸೇವಾ ಅವಧಿಯನ್ನು ಪೂರ್ಣಗೊಳಿಸಿರಬೇಕು.

ಆದರೆ, ಪ್ರಸ್ತುತ ಚರ್ಚೆಯಲ್ಲಿರುವ ಸಹಾಯಕಿಗೆ ಈ ನಿಗದಿತ ಸೇವಾ ಅವಧಿಯ ಅರ್ಹತೆ ಇಲ್ಲದಿದ್ದರೂ ಅವರನ್ನು ಈ ಹುದ್ದೆಗೆ ಪರಿಗಣಿಸಲು ಅಧಿಕಾರಿಗಳು ತೆರೆಮರೆಯ ಕಸರತ್ತು ನಡೆಸುತ್ತಿದ್ದಾರೆಂದು ಗ್ರಾಮಸ್ಥರು ದೂರಿದ್ದಾರೆ.

### ಸರ್ಕಾರಿ ವಸತಿ ಪದವಿ ಕಾಲೇಜಿಗೆ ಸೌಲಭ್ಯ ಕಲ್ಪಿಸಿ: ರೈತ ಸಂಘದಿಂದ ಆಗ್ರಹ

• ಉದಯವಾಹಿನಿ, ಮುಳಬಾಗಿಲು

ಸರ್ಕಾರಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜಿಗೆ ಹಾಗೂ ವಸತಿ ನಿಲಯಗಳಿಗೆ ಕೂಡಲೇ ಮೂಲಭೂತ ಸೌಕರ್ಯ ಒದಗಿಸಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಒತ್ತಾಯಿಸಿ ಶುಕ್ರವಾರ ರೈತ ಸಂಘದಿಂದ ತಹಶೀಲ್ದಾರ್ ವಿ.ಗೀತಾ ಅವರ ಮುಖಾಂತರ ಉನ್ನತ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿದರು. ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಮೂಲಭೂತ ಸೌಕರ್ಯಗಳಿಲ್ಲವೆಂಬ ನೆಪದಲ್ಲಿ ಖಾಸಗಿ ಶಾಲಾ ಕಾಲೇಜುಗಳು ಬಡವರಿಂದ ಲಕ್ಷಾಂತರ ರೂಪಾಯಿ ಸುಳಿಗೆ ಮಾಡುತ್ತಾರೆ.

ಹಾಗಾಗಿ ಸರ್ಕಾರಿ ಕಾಲೇಜುಗಳಿಗೆ ಮೂಲಭೂತ ಸೌಕರ್ಯ ಒದಗಿಸಿ ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣ ಗೌಡ ಒತ್ತಾಯಿಸಿದರು. 25 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ದೇವರಾಯ ಸಮುದ್ರ ಬಳಿ ಇರುವ ಸುಸಜ್ಜಿತ ಸರ್ಕಾರಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಕಟ್ಟಡ ಅತ್ಯಂತ ಆಕರ್ಷಕವಾಗಿದು, ವಸತಿ ಸೌಲಭ್ಯ ಸಿಗಬಹುದು ಎಂದು ನೂರಾರು ವಿದ್ಯಾರ್ಥಿಗಳು ದಾಖಲಾಗಿದ್ದರು.

### ನ್ಯಾನೊ ಯೂರಿಯಾ ಬಳಸಿ: ಕೃಷಿ ಅಧಿಕಾರಿ ಎಚ್.ಎಸ್ ರಕ್ಷಿತ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಾಗೂರು

ಯೂರಿಯಾ ಹಾಗೂ ರಸಗೊಬ್ಬರದ ಬೆಲೆಯ ಹೆಚ್ಚಳ ಹಾಗೂ ದಾಸ್ತಾನು ಕೊರತೆ ನೀಗಿಸುವ ಸಲುವಾಗಿ ರೈತರು ಕೃಷಿ ಚಟುವಟಿಕೆಗೆ ನ್ಯಾನೊ ಯೂರಿಯಾ ಬಳಸುವಂತೆ ಹೋಬಳಿ ಕೃಷಿ ಅಧಿಕಾರಿ ಎಚ್.ಎಸ್ ರಕ್ಷಿತ್ ತಿಳಿಸಿದರು.

ಹೋಬಳಿಯ ಭಕ್ತರಹಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆ ವತಿಯಿಂದ ಆಹಾರ ಮತ್ತು ಪೌಷ್ಟಿಕ ಭದ್ರತೆಯ ಎಫ್‌ಎನ್‌ಎಸ್ ಯೋಜನೆ ಯಡಿ ಅಲಸಂದೆ ರಾಗಿ ಗೊಬ್ಬರ ಇತರೆ ಪರಿಕರಗಳ ವಿತರಣೆಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಗಲ್ಫ್ ರಾಷ್ಟ್ರಗಳಲ್ಲಿ ಯುದ್ಧದ ಹಿನ್ನಲೆಯಲ್ಲಿ ಯೂರಿಯಾ ಹಾಗೂ ರಸಗೊಬ್ಬರದ ಕೊರತೆಯನ್ನು ತಪ್ಪಿಸಲು ರೈತರು ಸಾವಯವ ಕೃಷಿ ಹಾಗೂ ನ್ಯಾನೊ ಯೂರಿಯಾ ಬಳಕೆ ಮಾಡುವ ಮೂಲಕ ಸದ್ಯದ ಪರಿಸ್ಥಿತಿಗೆ ಅನುಗುಣವಾಗಿ ಕೃಷಿ ಚಟುವಟಿಕೆಗೆ ಆದ್ಯತೆ ನೀಡುವಂತೆ ಸಲಹೆ ನೀಡಿದರು. ಕ್ಷೇತ್ರದ ಶಾಸಕರಾದ ಸಿ.ಎನ್ ಬಾಲಕೃಷ್ಣ ಹಾಗೂ ತಾಲ್ಲೂಕು ಕೃಷಿ ಸಹಾಯಕ ನಿರ್ದೇಶಕರಾದ ಮೋಹನ್ ಅವರ ಸಲಹೆಯಂತೆ ಭಕ್ತರಹಳ್ಳಿ ಗ್ರಾಮವನ್ನು ಆಯ್ಕೆ ಮಾಡಿಕೊಂಡು 100 ಹೆಕ್ಟೇರ್ ಪ್ರದೇಶದ ಬಿತ್ತನೆಗಾಗಿ ಪ್ರಸ್ತುತ ಸಾಲಿನಲ್ಲಿ ಗ್ರಾಮದ 100 ರೈತರಿಗೆ 2500 ಬೆಲೆಯ ಬೀಜ- ಗೊಬ್ಬರ ಉಚಿತವಾಗಿ ನೀಡಲಾಗುತ್ತಿದ್ದು, ಜೊತೆಗೆ ಸಹಾಯಧನದ ಹಣವನ್ನು ರೈತರ ಖಾತೆಗೆ ನೇರವಾಗಿ ಹಾಕಲಾಗುತ್ತದೆ ಎಂದರು.ಸದ್ಯಪೂರ್ವ ಮುಂಗಾರಿಗೆ ರೈತರಿಗೆ ಬಿತ್ತನೆಗೆ ಹೆಸರು, ಕಾಳು ಅಲಸಂದೆ, ಜೋಳ ,ಸೇರಿದಂತೆ ಇತರೆ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ಕೊಡಲಾಗುತ್ತಿದೆ. ರೈತರು ತಪ್ಪದೆ ಕೃಷಿ ಇಲಾಖೆಗೆ ಭೇಟಿ ನೀಡಿ ಪಡೆದುಕೊಳ್ಳುವಂತೆ ಮನವಿ ಮಾಡಿದರು.ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ನಂಜುಂಡಪ್ಪ, ಕೃಷಿ ಪತ್ತಿನ ನಿರ್ದೇಶಕ ಬಿಎನ್ ಮಾಲಿಂಗಪ್ಪ, ಕೃಷಿ ಇಲಾಖೆಯ ಸಿಬ್ಬಂದಿ ಬಸವರಾಜು, ವೀಣಾ, ಕೃಷಿ ಸುಖಿಯರು ಮತ್ತು ರೈತರು ಹಾಜರಿದ್ದರು.

ಅಂತರಾಳದಿಂದ..
EDITORIAL

# ಈ ಸಿದ್ಧವಿರಾಮ, ಪೂರ್ಣ ವಿರಾಮವಾಗದಿರಲಿ



ಸಿದ್ದರಾಮಯ್ಯ ಅವರ ರಾಜಕೀಯ ಬದುಕಿಗೆ ಅಲ್ಪವಿರಾಮ ಬಿದ್ದಿದೆ. ಇದರ ಜೊತೆ ಜೊತೆಗೇ ಸಿದ್ದರಾಮಯ್ಯ ಅವರ ಸಾರ್ವಜನಿಕ ರಾಜಕೀಯಕ್ಕೆ ಪೂರ್ಣ ವಿರಾಮ ಬೀಳುತ್ತದೆಯೇ ಎನ್ನುವುದು ಮಾತ್ರ ನಿರ್ಧಾರವಾಗಿಲ್ಲ. ಹಣಕಾಸು ಸಚಿವರಾಗಿ 17 ಬಾರಿ ಬಜೆಟ್ ಮಂಡಿಸಿ, ಎರಡು ಬಾರಿ ಉಪಮುಖ್ಯಮಂತ್ರಿಯಾಗಿ, ವಿಧಾನಸಭೆಯ ವಿಪಕ್ಷ ನಾಯಕರಾಗಿ, ಎರಡು ಬಾರಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಈ ರಾಜ್ಯ ರಾಜಕೀಯಕ್ಕೆ ಕೊಟ್ಟ ಕೊಡುಗೆ ಅವಿಸ್ಮರಣೀಯವಾದುದು. ದೇವರಾಜ ಅರಸು ಬಳಿಕ, ತಳಸ್ತರದ ಜನರೆಡೆಗೆ ಆಡಳಿತವನ್ನು ತಲುಪಿಸಲು ಪ್ರಯತ್ನಿಸಿದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಗುರುತಿಸಲ್ಪಡುತ್ತಿದ್ದಾರೆ. ಸಿದ್ದರಾಮಯ್ಯ ಎಂದಾಗ ಗ್ರಾಮೀಣ ಪ್ರದೇಶದ ಮಹಿಳೆಯರ ಮುಖ ಅರಳುತ್ತದೆ. ದುರ್ಬಲರ ಪರವಾಗಿರುವ ಆಡಳಿತವನ್ನು ನೀಡುವ ಕನಸುಗಳೊಂದಿಗೆ ಅವರು ಗದ್ದುಗೆಯನ್ನೇರಿದರು. ಆದರೆ ಅದನ್ನು ಎಷ್ಟರ ಮಟ್ಟಿಗೆ ಸಾಧಿಸಲು ಸಾಧ್ಯವಾಯಿತು ಎನ್ನುವುದು ಮಾತ್ರ ಪ್ರಶ್ನೆಯಾಗಿಯೇ ಉಳಿಯುತ್ತದೆ. ಮಂದಿರ, ಮಸೀದಿ, ಅದಾನಿ, ಅಂಬಾನಿಗಳ ಹೆಸರು ಜಪಿಸುತ್ತಾ ರಾಜಕೀಯ ನಡೆಸುವ ರಾಜಕಾರಣಿಗಳ ನಡುವೆ, ಅಹಿಂದ, ದಲಿತರು, ಮಹಿಳೆಯರು, ಬಡವರು, ದುರ್ಬಲರ ವಿಷಯಗಳನ್ನಿಟ್ಟುಕೊಂಡೇ ರಾಜಕೀಯ ನಡೆಸಿದರಲ್ಲ ಎನ್ನುವುದೇ ಅವರ ಬಹುದೊಡ್ಡ ಸಾಧನೆಯಾಗಿ ನಾವು ಗುರುತಿಸಬೇಕಾಗಿದೆ. ದೇವೇಗೌಡರ ಜೊತೆಗೆ ಬಿರುಕುಂಟಾಗಿ, ಜೆಡಿಎಸ್‌ನಿಂದ ಹೊರಬಂದಾಗ ಅವರು ಅಕ್ಷರಶಃ ಒಬ್ಬಂಟಿಯಾಗಿದ್ದರು. ಆ ಸಂದರ್ಭದಲ್ಲಿ ಅವರ ಯೋಗ್ಯತೆಯನ್ನು ಮುತ್ಸದ್ದಿತನವನ್ನು ಗುರುತಿಸಿ ಪಕ್ಷಕ್ಕೆ ಸ್ವಾಗತಿಸಿ ಅವರಿಗೆ ಯೋಗ್ಯ ಸ್ಥಾನವನ್ನು ನೀಡಿದ ಕಾಂಗ್ರೆಸ್‌ಗೆ ಸಿದ್ದರಾಮಯ್ಯ ನಿರಾಶೆ ಮಾಡಲಿಲ್ಲ. ರಾಜ್ಯದಲ್ಲಿ ಹೆಬ್ಬಾವಿನಂತೆ ಹೊರಳಾಡುತ್ತಿದ್ದ ಕಾಂಗ್ರೆಸ್ ಚುರುಕು ಪಡೆದದ್ದು ಸಿದ್ದರಾಮಯ್ಯ ಪ್ರವೇಶದ ಬಳಿಕ. ವಿರೋಧಪಕ್ಷದಲ್ಲಿ ಕುಳಿತು ರೆಡ್ಡಿ ಸಹೋದರರಿಗೆ ಸವಾಲೆಸೆದು ಅವರನ್ನು ಮಕಾಡೆ ಮಲಗಿಸಿದ ಹೆಗ್ಗಳಿಕೆ ಸಿದ್ದರಾಮಯ್ಯ ಅವರಿಗೆ ಸೇರಬೇಕು. ಸಿದ್ದರಾಮಯ್ಯ ನೇತೃತ್ವದ ಬಲದಿಂದ ಬಳ್ಳಾರಿ ಪಾದಯಾತ್ರೆಯ ಚೈತನ್ಯ ಕಾಂಗ್ರೆಸನ್ನು ಅಧಿಕಾರದೆಡೆಗೆ ತಲುಪಿಸಿತು.

2013ರಲ್ಲಿ ಕಾಂಗ್ರೆಸ್‌ನೊಳಗೆ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಹೊರತು ಪಡಿಸಿದ ಪರ್ಯಾಯ ಆಯ್ಕೆಯೇ ಇಲ್ಲ ಎನ್ನುವ ಸ್ಥಿತಿ ನಿರ್ಮಾಣವಾಯಿತು. ಕಾಂಗ್ರೆಸ್ ಅಧಿಕಾರಕ್ಕೇರಿದ ಬೆನ್ನಿಗೇ 'ಗ್ಯಾರಂಟಿ ಯೋಜನೆಗಳನ್ನು ತಕ್ಷಣ ಜಾರಿಗೊಳಿಸಿ' ಎಂದು ವಿರೋಧ ಪಕ್ಷದ ನಾಯಕರು ಒತ್ತಾಯಿಸ ತೊಡಗಿದ್ದರು. ಗ್ಯಾರಂಟಿ ಯೋಜನೆಗಳು ಜಾರಿಗೊಳಿಸುವುದಕ್ಕೆ ಅಸಾಧ್ಯ ಎನ್ನುವುದು ಅವರ ಗಟ್ಟಿ ನಂಬಿಕೆಯಾಗಿತ್ತು. ಆದರೆ ಸಿದ್ದರಾಮಯ್ಯ ನೇತೃತ್ವದ ಸರಕಾರ ಎಲ್ಲ ಗ್ಯಾರಂಟಿಗಳನ್ನು ಒಂದೊಂದಾಗಿ ಜಾರಿಗೊಳಿಸುತ್ತಲೇ ಹೋಯಿತ್ತು.

ಅಷ್ಟೇ ಅಲ್ಲ, ಆರ್ಥಿಕ ಒತ್ತಡಗಳ ನಡುವೆಯೂ ಗ್ಯಾರಂಟಿ ಯೋಜನೆಗಳಿಗೆ ಹಣದ ಕೊರತೆಯಾಗದಂತೆ ನೋಡಿಕೊಂಡಿತ್ತು. ಬಹುಶಃ 2023ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಅವರ ಬಹುದೊಡ್ಡ ಸಾಧನೆಯೆಂದರೆ, ಗ್ಯಾರಂಟಿ ಯೋಜನೆಗಳು ಸ್ಥಗಿತವಾಗದಂತೆ ನೋಡಿಕೊಂಡದ್ದು. ಆ ಮೂಲಕ ಸರಕಾರ ವಿರೋಧ ಪಕ್ಷದ ಬಾಯಿಗೆ ಆಹಾರವಾಗುವುದನ್ನು ಅವರು ತಪ್ಪಿಸಿದರು.ಇದೀಗ ರಾಜ್ಯದಲ್ಲಿ ಮುಖ್ಯಮಂತ್ರಿಯ ಬದಲಾವಣೆಯ ಅಗತ್ಯವಿತ್ತೇ ಎನ್ನುವ ಪ್ರಶ್ನೆಗೆ ಅರ್ಥವೇ ಇಲ್ಲ. ಇಂತಹದೊಂದು ಬದಲಾವಣೆಯ ಮಾತುಕತೆಯ ತಳಹದಿಯ ಮೇಲೆ ಸಿದ್ದರಾಮಯ್ಯ ಅವರು 2023ರಲ್ಲಿ ಮುಖ್ಯಮಂತ್ರಿಯಾಗಿರುವುದು ನಿಜವೇ ಆಗಿದ್ದರೆ ಅವರ ರಾಜೀನಾಮೆ ರಾಜ್ಯ ಕಾಂಗ್ರೆಸ್‌ನ ಭವಿಷ್ಯದ ದೃಷ್ಟಿಯಿಂದ ಅನಿವಾರ್ಯವಾಗಿತ್ತು.

### ಯೋಜನೆಗಳ ಪ್ರಣಾಳಿಕೆ

**2023ರ ಚುನಾವಣೆಯಲ್ಲಿ ಕಾಂಗ್ರೆಸ್ ವರಿಷ್ಠರು ಗ್ಯಾರಂಟಿ ಯೋಜನೆಗಳನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿದಾಗ ಅದರ ಜಾರಿಯ ನೇತೃತ್ವವನ್ನು ಸಿದ್ದರಾಮಯ್ಯ ಅವರು ವಹಿಸಿಕೊಂಡಿದ್ದರು.**

**ಗ್ಯಾರಂಟಿ ಯೋಜನೆಗಳನ್ನು ಘೋಷಿಸುವುದೇನೋ ಸುಲಭ. ಆದರೆ ಅದನ್ನು ಅನುಷ್ಠಾನಗೊಳಿಸಬೇಕಾದರೆ, ರಾಜ್ಯದ ವಿತ್ತೀಯ ಪರಿಸ್ಥಿತಿಯ ಬಗ್ಗೆ ಅನುಭವಿಯಾಗಿರುವ ನಾಯಕನೊಬ್ಬನ ಅಗತ್ಯವಿತ್ತು. ಹಲವು ಬಾರಿ ಹಣಕಾಸು ಸಚಿವರಾಗಿ 17 ಬಾರಿ ಬಜೆಟ್ ಮಂಡಿಸಿದ ಸಿದ್ದರಾಮಯ್ಯ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ಕಂಗೆಡಲಿಲ್ಲ.**

# ರಾಮಾಯಣ



ತನ್ನ ಕುರುಹಾಗಿ ಜನಕಜೆಯು ಹನುಮನಿಗೆ ತನ್ನ ಶಿರೋರತ್ನವನ್ನಿತ್ತು ಅವನನ್ನು ಬೀಳ್ಕೊಟ್ಟದ್ದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ನನ್ನ ಕಷ್ಟಗಳನ್ನು ನೆನೆಸಿಕೊಂಡು ದುಃಖಪಡುತ್ತಾನೆಯೇ? ಶತ್ರುಗಳನ್ನು ಜಯಿಸುವ ಉಪಾಯಗಳು ಅವನಿಗೆ ತಿಳಿದಿದೆಯೇ ಅನುವರ್ತಿಗಳೂ ಮಿತ್ರರೂ ರಾಜನ ಆಜ್ಞೆಯೊಳಗಿದ್ದಾರೆಯೇ? ಭರತನ ಶುಭೋದಯ, ಕೌಸಲ್ಯೆ ಸುಮಿತ್ರೆಯರ ಕ್ಷೇಮವಾರ್ತೆಗಳು ಬರುತ್ತಿರುವುವೇ ದುರುಳ ದಶಕಂಧರನನ್ನು ತರಿದು ಹಾಕಲು ದೇವತೆಗಳ ಸಹಾಯವನ್ನು ಯಾಚಿಸುತ್ತಾನೆಯೇ ಶ್ರೀರಾಮನು ನನ್ನ ವಿರಹದಿಂದ ದುಃಖಕ್ಕೊಳಗಾಗಿರುವನೇ ಧೈರ್ಯದಿಂದ ಕೂಡಿದ್ದಾನೆಯೇ ನನ್ನನ್ನು ಈ ದುಃಖಸಾಗರದಿಂದ ಪಾರುಮಾಡಲು ಸುಗ್ರೀವನು ಚತುರಂಗಸೈನ್ಯವನ್ನು ಸಹಾಯಕ್ಕೆ ನೀಡಿದ್ದಾನೆಯೇ ಭೇದ ಮೊದಲಾದ ಉಪಾಯಗಳಿಂದ ದಾನವರನ್ನು ಗೆಲ್ಲುವ ಬಗ್ಗೆ ಆಲೋಚಿದ್ದಾನೆಯೇ ಲಕ್ಷ್ಮಣನಿಗೆ ನನ್ನನ್ನು ಪಾರುಮಾಡುವ ಉತ್ಸಾಹವಿದೆಯೇ ನಸುನಗೆ, ಸವಿನುಡಿ, ಹೊಳೆಯುವ ಕಣ್ಣುಗಳ ರಾಘವೇಶ್ವರನನ್ನು ನೋಡಿ ಯಾವಾಗ ನಾನು ಅಪ್ಪಿಕೊಳ್ಳುವೆನೋ! ತಾಯಿತಂದೆಯರನ್ನು ತೊರೆದು ರಾಮನ ಶ್ರೀಚರಣ ಭಕ್ತಿಯಿಂದ ನಾನು ವನವಾಸಕ್ಕೆ ಬಂದೆ; ಹತ್ತಿರದ ಬಂಧುಗಳಾರನ್ನೂ ನೆನೆಯದೆ ರಾಮಸಾನ್ನಿಧ್ಯದಲ್ಲಿ ಎಲ್ಲಾ ಕ್ಲೇಶಕಷ್ಟಗಳನ್ನೂ ಮರೆತೆ; ಅಂತಹ ಶ್ರೀರಾಮನು ನನ್ನನ್ನು ಹೇಗೆ ನೆನಪಿಸಿಕೊಳ್ಳುತ್ತಾನೆ ಎಂದು ಕೇಳಿದಳು. ಆಗ ಹನುಮಂತನು ಕೈಮುಗಿದುಕೊಂಡು, ''ದೇವಿ, ಆತನಿಗೆ ಸದಾ ನಿನ್ನ ಚಿಂತೆಯೇ; ವಿಹಾರವನ್ನು ಬಿಟ್ಟು ನಿನ್ನ ವಿರಹದ ತಳ್ಳಂಕದಲ್ಲಿ ಬೇಯುತ್ತಿರುವನು. ನಾನು ಹೋಗಿ ನಿನ್ನ ನೆಲೆಯನ್ನು ತಿಳಿಸಲು ಇಲ್ಲಿಗೆ ಬಂದು ತನ್ನ ಹರಿತ ಬಾಣಗಳಿಂದ ಶತ್ರುಗಳನ್ನುನ್ನು ಕತ್ತರಿಸಿ ಹಾಕಿ, ಸುರೇಂದ್ರನು ಶಚಿಯನ್ನು ಕರೆದೊಯ್ಯುವಂತೆ ನಿನ್ನನ್ನೊಯ್ಯುವುದು ಖಂಡಿತ, ಚಿಂತಿಸಬೇಡಮ್ಮ ನಿನ್ನನ್ನು ಅಗಲಿದ ಕ್ಷಣದಿಂದ ರಾಘವ ಪ್ರಭುವು ವಿರಹತಾಪದಿಂದ ನಿಂತಳಿ ನಿಲ್ಲದೆ, ಮಾಂಸಮಧುಸೇವನೆಗಳನ್ನು ಬಿಟ್ಟು, ವನವಿಹಾರ ಬೇಟೆಗಳನ್ನು ತೊರೆದು, ರೋದನ ಪ್ರಮತ್ತಾಲಾಪ ನಿಟ್ಟುಸಿರುಗಳಿಂದ ಕೂಡಿ, ಮುಂದಿರುವುದನ್ನು ನೋಡದೆ ಎಡವುತ್ತ ನಿನ್ನ ಯೋಚನೆಯನ್ನೇ ತುಂಬಿಕೊಂಡಿದ್ದಾನೆ, ತಾಯಿ. ಸುಖನಿದ್ದೆ ಆತನಿಂದ ದೂರವಾಗಿದೆ, ಮೃದುನುಡಿಗಳಾವುದೂ ಆತನ ಕಿವಿಗಳನ್ನು ಹೊಗದು, ನಾಲಗೆಗೆ ಷಡ್ರುಚಿಗಳಲ್ಲಿ ಆಸಕ್ತಿ ಹೋಗಿದೆ, ಹಣ್ಣುಹೂಗಳ ಕಡೆ ಗಮನವಿಲ್ಲ, ಸದಾ ನಿನ್ನ ಮುದ್ದುಮೊಗ, ಮುಗುಳುನಗೆ, ಮುಡಿಯ ಸೊಬಗುಗಳನ್ನು ನೆನೆಸಿಕೊಳ್ಳುತ್ತ ರಕ್ಕಸನನ್ನು ಹೇಗೆ ಬಗ್ಗುಬಡಿಯಬೇಕೆಂದೇ ಆಲೋಚಿಸುತ್ತ ಕುಳಿತಿರುತ್ತಾನೆ, ದೇವಿ. ಸುಗ್ರೀವ ಅಂಗದ ಮುಂತಾದ ಕಪಿನಾಯಕರ ನೆರವನ್ನು ಪಡೆದು ರಾವಣಕುಲವನ್ನು ನಿರ್ನಾಮಗೊಳಿಸಿ ನಿನ್ನನ್ನು ಕರೆದೊಯ್ಯುವುದರಲ್ಲಿ ಸಂದೇಹವಿಲ್ಲ, ಚಿಂತೆಯನ್ನು ಬಿಟ್ಟುಬಿಡು ತಾಯಿ ಎಂದು ಭರವಸೆಯ ನುಡಿಗಳನ್ನಾಡಿದ.

ಹನುಮಂತನು ಆಡಿದ ಮಾತುಗಳಿಂದ ಹರ್ಷವನ್ನು ಹೊಂದಿದ ಧರಾಜಾತೆಯು ಹನುಮನನ್ನು ಕುರಿತು, ಈ ರಾಕ್ಷಸರ ನಡುವೆ ಕೇಳಿದ ನಿನ್ನ ಶುಭವಾಣಿಯು ಬಿಸಿಲು ತಂಪಾದಂತೆ, ವಿಷವು ಅಮೃತವಾದಂತೆ ನನ್ನಲ್ಲಿ ಚೈತನ್ಯವನ್ನು ತಂದಿದೆ. ಕಾಲಗತಿಯನ್ನು ಮೀರುವುದು ಯಾರಿಂದ ತಾನೇ ಸಾಧ್ಯ ಸಿರಿವಂತನಾದರೂ ದರಿದ್ರನಾದರೂ, ಯುದ್ಧದಲ್ಲಿ ಗೆದ್ದರೂ ಪರದ ಭಯವಿರದಿದ್ದರೂ, ಸುಖದಿಂದಿರಲಿ ಕಷ್ಟದಲ್ಲಿ ಮುಳುಗಿರಲಿ, ಪ್ರಾರಬ್ಧರಶ್ಮಿಯು ಜೀವರುಗಳನ್ನೆಲ್ಲ ಬರಸೆಳೆಯದೇ ಬಿಡುವುದಿಲ್ಲ. ಎಲ್ಲವೂ ಕಾಲವಶವಲ್ಲದೆ ಇಲ್ಲ. ರಕ್ಕಸರ ಕುಲವನ್ನು ನಾಶಮಾಡಿ, ದಶಗಳನನ್ನು ಒಕ್ಕಲಿಕ್ಕಿ ತ್ರಿಕೂಟಾದ್ರಿಯನ್ನು ಬುಡಸಮೇತ ಕಿತ್ತು ಸಮುದ್ರದಲ್ಲಿ ಕುಕ್ಕಿ ಚಿಂತಾಸಮುದ್ರವನ್ನು ದಾಟಿ ರಘುವೀರನು ಬಂದು ನನ್ನನ್ನು ರಕ್ಷಿಸುವುದು ಯಾವಾಗ ನನಗಿರುವುದು ಎರಡೇ ತಿಂಗಳ ಗಡುವು; ಅಷ್ಟರಲ್ಲಿ ನಾನು ವಶವಾಗದಿದ್ದರೆ ಕಡಿದು ತಿನ್ನುವೆನೆಂದು ರಾವಣನು ಶಪಥ ಮಾಡಿದ್ದಾನೆ ಎಂದು ವಿಭೀಷಣನ ಹೆಂಡತಿಯು ತನ್ನ ಮಗಳು ಅನಲೆಯ ಮೂಲಕ ನನಗೆ ಹೇಳಿಕಳಿಸಿದಳು.


ಮುಂದುವರೆಯುವುದು



## ಕಲಾ ಸಾಹಿತ್ಯ

ವಿಶ್ವಾಸ್ ಡಿ. ಗೌಡ
ಲೇಖಕರು
ಸಾಮಾಜಿಕ ಚಿಂತಕ

# 1 ಟಿಕೆಟ್ ಕ್ರಾಂತಿಯ ರೂವಾರಿ ಕನ್ನಡಿಗ ಕ್ಯಾಪ್ಟನ್ ಗೋಪಿನಾಥ್



ಬಡವನೂ ವಿಮಾನದಲ್ಲಿ ಹಾರಬೇಕು. ಈ ಒಂದು ಕನಸನ್ನು ನಿಜವಾಗಿಸಿದ ವ್ಯಕ್ತಿ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್. ಇಂದು ಭಾರತದಲ್ಲಿ ಸಾಮಾನ್ಯ ಜನರೂ ಕಡಿಮೆ ದರದಲ್ಲಿ ವಿಮಾನಯಾನ ಮಾಡುತ್ತಿರುವುದಕ್ಕೆ ಕಾರಣರಾದ ಮಹಾನ್ ಉದ್ಯಮಿ, ಕನಸುಗಾರ ಮತ್ತು ಸಾಹಸಿ ಇವರೇ. ಒಬ್ಬ ಶಿಕ್ಷಕರ ಮಗನಾಗಿ ಹುಟ್ಟಿ, ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ, ನಂತರ ಉದ್ಯಮಿಯಾಗಿ ದೇಶದ ಏವಿಯೇಷನ್ ಕ್ಷೇತ್ರವನ್ನೇ ಬದಲಿಸಿದ ಇವರ ಜೀವನ ಪ್ರತಿಯೊಬ್ಬ ಯುವಕನಿಗೂ ಪ್ರೇರಣೆ.

## ಹಳ್ಳಿಯ ಬಾಲಕನಿಂದ ರಾಷ್ಟ್ರದ ಉದ್ಯಮಿ

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಗೋಪಿನಾಥ್ ಅವರು 1951ರ ನವೆಂಬರ್ 13ರಂದು ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಶಿಕ್ಷಕರಾಗಿದ್ದು, ಕೃಷಿಯನ್ನೂ ಮಾಡುತ್ತಿದ್ದರು. ಬಾಲ್ಯದಿಂದಲೇ ಗೋಪಿನಾಥ್ ಅವರಿಗೆ ಪ್ರಕೃತಿ, ಪುಸ್ತಕಗಳು ಮತ್ತು ಹೊಸ ವಿಚಾರಗಳ ಮೇಲೆ ಅಪಾರ ಆಸಕ್ತಿ. ಸಾಮಾನ್ಯ ಶಿಕ್ಷಣಕ್ಕಿಂತ ಜೀವನ ಪಾಠಗಳೇ ಮುಖ್ಯ ಎಂದು ನಂಬಿದ್ದ ತಂದೆ, ಆರಂಭದಲ್ಲಿ ಮನೆಯಲ್ಲೇ ಶಿಕ್ಷಣ ನೀಡಿ ನಂತರ ನೇರವಾಗಿ ಐದನೇ ತರಗತಿಗೆ ಸೇರಿಸಿದರು. ನಂತರ ಬಿಜಾಪುರದ ಸೈನಿಕ ಶಾಲೆಗೆ ಸೇರಿದ್ದ ಗೋಪಿನಾಥ್ ಅವರ ಜೀವನದಲ್ಲಿ ಅದೊಂದು ಮಹತ್ವದ ತಿರುವಾಯಿತು. ಶಿಸ್ತು, ಧೈರ್ಯ ಮತ್ತು ದೇಶಭಕ್ತಿ ಅಲ್ಲಿ ಅವರ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿತು.

ಹೊಸ ವಿಚಾರಗಳ ಮೇಲೆ ಅಪಾರ ಆಸಕ್ತಿ

## ಭಾರತೀಯ ಸೇನೆಯ ಕ್ಯಾಪ್ಟನ್

## ಭಾರತೀಯ ಭೂಸೇನೆಯಲ್ಲಿ ಅಧಿಕಾರಿಯಾಗಿ ಸೇವೆ

ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಪಾಸಾದ ಬಳಿಕ ಅವರು ಭಾರತೀಯ ಸೇನೆಗೆ ಸೇರಿದರು. ಸುಮಾರು ಎಂಟು ವರ್ಷಗಳ ಕಾಲ ಭಾರತೀಯ ಭೂಸೇನೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು. 1971ರ ಬಾಂಗ್ಲಾದೇಶ ವಿಮೋಚನಾ ಯುದ್ಧದಲ್ಲೂ ಭಾಗವಹಿಸಿದ ಅವರು ತಮ್ಮ ಕರ್ತವ್ಯವನ್ನು ಶ್ರದ್ಧೆಯಿಂದ ನೆರವೇರಿಸಿದರು. ಸೇನೆ ಜೀವನ ಅವರಿಗೆ ಶಿಸ್ತು ಮತ್ತು ನಾಯಕತ್ವ ಕಲಿಸಿದರೂ, ಅವರ ಮನಸ್ಸಿನಲ್ಲಿ ಸ್ವತಂತ್ರವಾಗಿ ಏನಾದರೂ ಸಾಧಿಸಬೇಕು ಎಂಬ ಕನಸು ಕುದಿಯುತ್ತಲೇ ಇತ್ತು. ಕೇವಲ 28ನೇ ವಯಸ್ಸಿನಲ್ಲಿ ಅವರು ಸೇನೆಗೆ ರಾಜೀನಾಮೆ ನೀಡಿ ಹೊಸ ಬದುಕಿನ ಹುಡುಕಾಟ ಆರಂಭಿಸಿದರು.

## ವಿಫಲತೆಗಳಿಂದಲೇ ಯಶಸ್ಸಿನ ಮೆಟ್ಟಲು

ಸೇನೆ ತೊರೆದ ನಂತರ ಅವರು ನೇರವಾಗಿ ಯಶಸ್ವಿನತ್ತ ಸಾಗಲಿಲ್ಲ. ಕೃಷಿ, ಹಾಲು ಉತ್ಪಾದನೆ, ಕೋಳಿ ಸಾಕಣೆ, ಮೋಟಾರ್ ಬೈಕ್ ಡೀಲರ್‌ಶಿಪ್, ಉಡುಪಿ ಹೋಟೆಲ್, ಸಿಂಚನ ಸಾಧನಗಳ ವ್ಯಾಪಾರ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಕೈಹಾಕಿದರು. ಕೆಲವೆಡೆ ನಷ್ಟ ಅನುಭವಿಸಿದರು, ಕೆಲವೆಡೆ ಸಣ್ಣ ಮಟ್ಟಿನ ಯಶಸ್ಸು ಕಂಡರು.

ಆದರೆ ಪ್ರತಿಯೊಂದು ವಿಫಲತೆಯನ್ನೂ ಪಾಠವಾಗಿ ತೆಗೆದುಕೊಂಡ ಅವರು ಎಂದಿಗೂ ಕುಗ್ಗಲಿಲ್ಲ.ವಿಫಲತೆ ಅಂತ್ಯವಲ್ಲ, ಅದು ಹೊಸ ದಾರಿಯ ಆರಂಭ ಎಂಬುದನ್ನು ತಮ್ಮ ಜೀವನದ ಮೂಲಕ ತೋರಿಸಿದರು.

## ಆಕಾಶದಲ್ಲಿ ಹೊಸ ಕ್ರಾಂತಿ?

ಏರ್ ಡೆಕ್ಕನ್ನಬ್ಧ್ಯ 1990ರ ದಶಕದಲ್ಲಿ ಭಾರತದಲ್ಲಿ ವಿಮಾನಯಾನ ಶ್ರೀಮಂತರಿಗಷ್ಟೇ ಸೀಮಿತವಾಗಿತ್ತು. ಸಾಮಾನ್ಯ ಜನರಿಗೆ ವಿಮಾನದಲ್ಲಿ ಪ್ರಯಾಣಿಸುವುದು ಕನಸೇ ಆಗಿತ್ತು. ಇದೇ ಸಮಯದಲ್ಲಿ ಗೋಪಿನಾಥ್ ಅವರ ಮನಸ್ಸಿನಲ್ಲಿ ಒಂದು ದೊಡ್ಡ ಆಲೋಚನೆ ಮೂಡಿತು ರೈತ, ಶಿಕ್ಷಕ, ಮಧ್ಯಮ ವರ್ಗದವನು ಕೂಡ ವಿಮಾನದಲ್ಲಿ ಪ್ರಯಾಣಿಸಬೇಕು. ಈ ಕನಸೇ ''ಏರ್ ಡೆಕ್ಕನ್'' ಹುಟ್ಟಿಗೆ ಕಾರಣವಾಯಿತು.

2003ರಲ್ಲಿ ಕೇವಲ ಎರಡು ಹಳೆಯ ವಿಮಾನಗಳೊಂದಿಗೆ ಅವರು ಏರ್ ಡೆಕ್ಕನ್ ಆರಂಭಿಸಿದರು. ಅಂದಿನ ಪರಿಸ್ಥಿತಿಯಲ್ಲಿ ಇದು ಅಸಾಧ್ಯ ಸಾಹಸವೆಂದು ಹಲವರು ಟೀಕಿಸಿದರು. ಆದರೆ ಗೋಪಿನಾಥ್ ಹಿಂದೆ ಸರಿಯಲಿಲ್ಲ. ಕಡಿಮೆ ದರದ ವಿಮಾನಯಾನ ವ್ಯವಸ್ಥೆಯನ್ನು ಭಾರತದಲ್ಲಿ ಪರಿಚಯಿಸಿದ ಮೊದಲ ವ್ಯಕ್ತಿಯಾಗಿ ಅವರು ಇತಿಹಾಸ ನಿರ್ಮಿಸಿದರು. 1 ಟಿಕೆಟ್ ಯೋಜನೆ ದೇಶದ ಜನರನ್ನು ಅಚ್ಚರಿಗೊಳಿಸಿತು. ಸಾಮಾನ್ಯ ಬಸ್ ಪ್ರಯಾಣ ದರಕ್ಕಿಂತಲೂ ಕಡಿಮೆ ದರದಲ್ಲಿ ವಿಮಾನ ಟಿಕೆಟ್ ನೀಡಿದ ಕಾರಣ ಲಕ್ಷಾಂತರ ಜನ ಮೊದಲ ಬಾರಿಗೆ ವಿಮಾನ ಹತ್ತಿದರು.

## ಯುವಕರಿಗೆ ಸ್ಫೂರ್ತಿ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರ ಜೀವನ ನಮಗೆ ಒಂದು ದೊಡ್ಡ ಪಾಠ ಹೇಳುತ್ತದೆ ದೊಡ್ಡ ಕನಸು ಕಾಣಲು ಶ್ರೀಮಂತ ಕುಟುಂಬ ಬೇಕಾಗಿಲ್ಲ; ಧೈರ್ಯ, ಪರಿಶ್ರಮ ಮತ್ತು ನಂಬಿಕೆ ಸಾಕು. ಹಳ್ಳಿಯ ಒಂದು ಶಿಕ್ಷಕರ ಮಗ, ತನ್ನ ಕನಸಿನ ಮೂಲಕ ದೇಶದ ಕೋಟ್ಯಾಂತರ ಜನರ ಜೀವನದಲ್ಲಿ ಬದಲಾವಣೆ ತಂದರು. ವಿಫಲತೆಗಳ ನಡುವೆಯೂ ಹೋರಾಡಿ, ಅಸಾಧ್ಯವೆನಿಸಿದ ಕನಸನ್ನು ಸಾಕಾರಗೊಳಿಸಿದ ಅವರ ಜೀವನ ನಿಜಕ್ಕೂ ಪ್ರತಿಯೊಬ್ಬ ಭಾರತೀಯನಿಗೂ ಪ್ರೇರಣೆ.ಆಕಾಶದಲ್ಲಿ ಹಾರಿದದ್ದು ಕೇವಲ ವಿಮಾನವಲ್ಲ; ಸಾಮಾನ್ಯ ಜನರ ಕನಸುಗಳೂ ಹೌದು. ಆ ಕನಸುಗಳಿಗೆ ರೆಕ್ಕೆ ಕೊಟ್ಟ ಮಹಾನ್ ವ್ಯಕ್ತಿಯೇ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್.

## ಸೇನೆಗೆ ರಾಜೀನಾಮೆ ನೀಡಿ ಹೊಸ ಬದುಕಿನ ಹುಡುಕಾಟ

## ಸಿನಿಮಾ ಆದ ಜೀವನಗಾಥೆ

ಗೋಪಿನಾಥ್ ಅವರ ಆತ್ಮಕಥೆ '' ದೇಶಾದ್ಯಂತ ಅಪಾರ ಮೆಚ್ಚುಗೆ ಗಳಿಸಿತು. ಈ ಕಥೆಯನ್ನು ಆಧರಿಸಿ ತಮಿಳಿನಲ್ಲಿ ''ಸೂರರೈ ಪೊಟ್ರು'' ಎಂಬ ಸಿನಿಮಾ ನಿರ್ಮಾಣವಾಗಿ ದೊಡ್ಡ ಯಶಸ್ಸು ಕಂಡಿತು. ನಟ ಅಭಿನಯಿಸಿದ ಈ ಚಿತ್ರ ರಾಷ್ಟ್ರೀಯ ಪ್ರಶಸ್ತಿಯನ್ನೂ ಪಡೆದುಕೊಂಡಿತು. ನಂತರ ಇದರ ಹಿಂದಿ ರಿಮೇಕ್ ಕೂಡ ಬಿಡುಗಡೆಯಾಯಿತು.

## ಭಾರತೀಯ ಏವಿಯೇಷನ್ ಕ್ಷೇತ್ರದ ದಿಕ್ಕೇ ಬದಲಿಸಿದ ವ್ಯಕ್ತಿ

ಏರ್ ಡೆಕ್ಕನ್ ಕೇವಲ ಒಂದು ಕಂಪನಿ ಅಲ್ಲ; ಅದು ಭಾರತದಲ್ಲಿ ವಿಮಾನಯಾನವನ್ನು ಜನಸಾಮಾನ್ಯರಿಗೂ ತಲುಪಿಸಿದ ಕ್ರಾಂತಿ. ಸಣ್ಣ ಪಟ್ಟಣಗಳಿಗೂ ವಿಮಾನ ಸಂಪರ್ಕ ನೀಡುವ ಮೂಲಕ ಅವರು ಹೊಸ ಮಾರುಕಟ್ಟೆ ಸೃಷ್ಟಿಸಿದರು. ಇಂದು ಕಡಿಮೆ ದರದ ವಿಮಾನ ಸೇವೆಗಳು ಸಾಮಾನ್ಯವಾಗಿರುವುದಕ್ಕೆ ಮೂಲ ಕಾರಣ ಗೋಪಿನಾಥ್ ಅವರ ದೂರದೃಷ್ಟಿ. ನಂತರ ಆರ್ಥಿಕ ಸವಾಲುಗಳಿಂದ ಏರ್ ಡೆಕ್ಕನ್ ಅನ್ನು ಕಿಂಗ್‌ಫಿಷರ್ ಏರ್ ಲೈನ್ಸ್‌ಗೆ ಮಾರಬೇಕಾಯಿತು. ಆದರೂ ಗೋಪಿನಾಥ್ ಅವರ ಸಾಧನೆ ಮತ್ತು ದೃಷ್ಟಿಕೋನ ಎಂದಿಗೂ ಮಸುಕಾಗಲಿಲ್ಲ.



## ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

# ಮಲ್ಲರ ಬಾಹುಬಲಕ್ಕೆ ತೆಂಗಿನ ಮರದ ದೇಸಿ ತಾಲೀಮು!

**ಮರವನ್ನು ಅಪ್ಪಿದಾಗ ದೇಹದ ಭಾರವೆಲ್ಲ ಅಂಗೈ, ಮಣಿಕಟ್ಟು, ಬೆರಳುಗಳ ತುದಿಗೆ ಇಳಿಯುತ್ತದೆ. ಗರುಕಾದ ಕಾಂಡವನ್ನು ಬಿಗಿದಪ್ಪುವ ಹೋರಾಟದಲ್ಲಿ ವಜ್ರದಂಥ ಮುಷ್ಟಿ ಸಿದ್ಧವಾಗುತ್ತದೆ. ಕುಸ್ತಿಯಲ್ಲಿ ಹಿಡಿದ ಕೈ ಜಾರದಂತೆ ಕಾಯಲು ಈ ಬಿಗಿಯೇ ಕವಚ. ಪಾದಗಳು ಮಿಂಚಿನಂತೆ ದೇಹವನ್ನು ಊರ್ಧ್ವಮುಖಿ ತಳ್ಳಿದಾಗ ತೊಡೆ, ಮೀನಖಂಡ ಉಕ್ಕಿನಂತೆ ಬಿಗಿಯಾಗುತ್ತವೆ. ಸೊಂಟದ ಲಯಬದ್ಧ ನರ್ತನದಿಂದ ಬೆನ್ನೆಲುಬು ಬಳುಕಾಗಿ, ಕಣದಲ್ಲಿ ಕಲ್ಲಿನಂತೆ ನಿಲ್ಲುವ ಸ್ಥೈರ್ಯ ಒದಗುತ್ತದೆ.**

**ಬರಿಕೈ, ಬರಿಪಾದದಲ್ಲಿ ಮರವನ್ನು ಅಪ್ಪಿ, ಕಾಲಿನ ಸಂಕೋಲೆ ಹಿಡಿತದಿಂದ ಮೇಲೇರುವ ಈ ಕಲೆ ಏರಿದಷ್ಟೇ ಇಳಿಯುವಲ್ಲೂ ನೈಪುಣ್ಯ ಬೇಡುತ್ತದೆ.**



ಪೈಲ್ವಾನರ ಕಬ್ಬಿಣದ ಮೈಕಟ್ಟಿನ ದಂತಕಥೆಗಳು ಇಂದಿಗೂ ನಾಡಿನ ನೆನಪಿನಲ್ಲಿ ಜೀವಂತವಾಗಿವೆ. ಕಣದಲ್ಲಿ ಪ್ರತಿಸ್ಪರ್ಧಿಯನ್ನು ಧೂಳು ತಿನ್ನಿಸುವ ಅವರ ಮಿಂಚಿನ ತಾಕತ್ತಿಗೆ ಗರಡಿಯ ದಂಡ-ಬೈಠಕ್ ಒಂದೇ ಅಲ್ಲ, ದೈನಂದಿನ ಬದುಕಿನ ಮಣ್ಣಿನ ಕಸುವೂ ಸಾಥ್ ನೀಡಿತ್ತು.

ಪ್ರಕೃತಿಯನ್ನೇ ತೆರೆದ ವ್ಯಾಯಾಮ ಶಾಲೆಯಾಗಿಸಿದ ಪೂರ್ವಜರು ಶೋಧಿಸಿದ ಸಾಹಸಮಯ ಸಾಧನೆಯೇ ತೆಂಗಿನ ಮರದ ಆರೋಹಣ. ಯಂತ್ರಗಳ ಹಗ್ಗ ಏರುವಿಕೆಗೆ ಇದು ನಮ್ಮ ನೆಲದ ನೈಜ, ರೋಮಾಂಚಕ ಪರ್ಯಾಯ.

ಇದು ಕೇವಲ ಬಾಹುಬಲದ ಪ್ರದರ್ಶನವಲ್ಲ; ಲಕ್ಷ್ಯ, ಚಾಣಾಕ್ಷತೆ ಮತ್ತು ಮೈಯ ತೂಕದ ಜಾಣ ನಿರ್ವಹಣೆಯ ಸಂಗಮ.

ಇದು ಹೃದಯಕ್ಕೂ ಉಸಿರಿಗೂ ಅಮೃತ. ಶಿಖರ ಮುಟ್ಟುವ ಹೊತ್ತಿಗೆ ನಾಡಿಮಿಡಿತ ಏರಿ, ರಕ್ತದ ಹರಿವು ಪ್ರವಾಹವಾಗುತ್ತದೆ. ಶ್ವಾಸಕೋಶ ಪೂರ್ಣವಾಗಿ ಅರಳಿ ದಮ್ಮು ದ್ವಿಗುಣಗೊಳ್ಳುತ್ತದೆ. ದೀರ್ಘ ಕಾಳಗಕ್ಕೂ ಮೈ ಬಳಲದ ಛಲ ಇಲ್ಲಿಂದಲೇ ಮೊಳೆಯುತ್ತದೆ. ಭೂಮಿಯ ಸೆಳೆತದ ಜೊತೆಗಿನ ಈ ಮಲ್ಲಯುದ್ಧದಲ್ಲಿ ಮೈಯ ಪ್ರತಿ ನರವೂ ತಪಗೊಂಡು ವಜ್ರವಾಗುತ್ತದೆ. ಆದರೆ ಮುನ್ನೆಚ್ಚರಿಕೆ ಮುಖ್ಯ. ನವಶಿಷ್ಯರು ಗುಬ್ಬಿಯಷ್ಟು ಮರದಲ್ಲಿ, ಗುರುಗಳ ಕಣ್ಗಾವಲಲ್ಲೇ ಪಳಗಬೇಕು. ಪಾಚಿ ಮೆತ್ತಿದ, ಜಾರು ಕಾಂಡದಿಂದ ದೂರವಿರಿ. ಕೃತಕ ಶಕ್ತಿವರ್ಧಕಗಳ ಮರೀಚಿಕೆಗೆ ಬೀಳದೆ, ಈ ಪಾರಂಪರಿಕ ಪಾಠವನ್ನು ಮೈಗೂಡಿಸಿಕೊಂಡರೆ ಆಜೀವ ಬಲ, ಬೆದರದ ಎದೆಗುಂದದ ಧೈರ್ಯ ಸಿದ್ಧಿ. ಗರಡಿಯ ಈ ಜೀವಂತ ಪರಂಪರೆ ನಮ್ಮ ಕ್ರೀಡಾ ವೈಭವದ ಜ್ಯೋತಿರ್ಲಿಂಗ. ಹಿರಿಯರ ಈ ಮಣ್ಣಿನ ವಿಜ್ಞಾನ ಇಂದಿನ ಯುವ ತಲೆಮಾರಿಗೂ ದಾರಿದೀವಿಗೆಯಾಗಲಿ.

## ಬನ್ನಿ ಬನ್ನಿ ಮಕ್ಕಳೇ..

ಬನ್ನಿ ಮಕ್ಕಳೇ ಶಾಲೆಗೆ ಹೋಗೋಣ
ಬೇಸಿಗೆ ಹೋಯಿತ್ತು ಮಳೆಗಾಲ ಬಂತು
ಹಚ್ಚ ಹಸಿರಿನ ಗಿಡಗಳು
ಶಾಲೆಯ ಸುತ್ತಮುತ್ತ ಹೂವಿನ ಗಿಡಗಳು
ಹೊಸ ಪುಸ್ತಕಗಳು ಹೊಸ ಬ್ಯಾಗ್‌ಗಳು
ಹೊಸ ಸಮ ವಸ್ತ್ರಗಳು
ಗೆಳತಿ ಗೆಳೆಯರ ಮಾತುಗಳು
ಹೊಸ ಹೊಸ ವಿಚಾರಗಳು
ಆಡುತಾ ಓದುತ ನಲಿಯುತ
ಹೊಸ ಪಾಠಗಳನ್ನು ಕಲಿಯೋಣ
ಓದುತ ಬರೆಯುತ ಒಂದಿಷ್ಟು ಸಾಧಿಸೋಣ
ಬನ್ನಿ ಮಕ್ಕಳೇ ಶಾಲೆಗೆ ಹೋಗೋಣ.



ವಿ.ಎಂ. ಎಸ್. ಗೋಪಿ
ಲೇಖಕರು
ಬೆಂಗಳೂರು.

# ಬೆಂಗಳೂರು ಶೈಲಿಯ ಟೇಸ್ಟಿ ಟೇಸ್ಟಿ 'ಶೇಂಗಾ ಚಟ್ನಿ'

ನಿಮ್ಮ ದೈನಂದಿನ ಉಪಾಹಾರದೊಂದಿಗೆ ಒಂದೇ ಬಗೆಯ ಚಟ್ನಿ ಸೇವಿಸುವುದು ತುಂಬಾ ಬೇಸರ ತರಿಸಬಹುದು. ಇಂದು ನಿಮಗಾಗಿ ಸರಳವಾಗಿ ತಯಾರಿಸಬಹುದಾದ ಹಾಗೂ ಸಂಪೂರ್ಣವಾಗಿ ತಾಜಾ ಪರಿಮಳವನ್ನು ನೀಡುವ ನೂತನ ರೆಸಿಪಿ ನಿಮಗೆ ತಂದಿದ್ದೇವೆ. ಅದುವೇ, ಬೆಂಗಳೂರು ಟಿಫಿನ್ ಸೆಂಟರ್ ಶೈಲಿಯ ಶೇಂಗಾ ಚಟ್ನಿ. ಇದನ್ನು ತಯಾರಿಸಲು ಅಧಿಕ ಸಮಯ ಬೇಕಿಲ್ಲ. ಒಮ್ಮೆ ಈ ರೆಸಿಪಿಯನ್ನು ತಯಾರಿಸಿ ರುಚಿ ನೋಡಿದರೆ, ನೀವು ಅದನ್ನು ಮತ್ತೆ ಮತ್ತೆ ಸಿದ್ಧಪಡಿಸಲು ಬಯಸುತ್ತೀರಿ.



ಸಖತ್ ರುಚಿಕರವಾದ ಶೇಂಗಾ ಚಟ್ನಿಯು ಇಡ್ಲಿ, ದೋಸೆ, ವಡೆ ಸೇರಿದಂತೆ ವಿವಿಧ ಉಪಾಹಾರಗಳಿಗೆ ಪರಿಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಮನೆಯ ಎಲ್ಲಾ ಸದಸ್ಯರಿಗೂ ಹಿಡಿಸುವಂತಹ ಬೆಂಗಳೂರು ಶೈಲಿಯ ಸಖತ್ ರುಚಿಕರವಾದ ಶೇಂಗಾ ಚಟ್ನಿ ತಯಾರಿಸುವುದು ಹೇಗೆ ಎಂಬುದನ್ನು ತಿಳಿಯೋಣ.

ಶೇಂಗಾ - 2 ಕಪ್ ಹುಣಸೆಹಣ್ಣು - ಒಂದು ಸಣ್ಣ ತುಂಡು ಹಸಿ ಮೆಣಸಿನಕಾಯಿ - 15 ಪುಟಾಣಿ - 1 ಕಪ್ ಕರಿಬೇವು - ಒಂದು ಸಣ್ಣ ಚಿಗುರು ಪುದೀನ ಎಲೆಗಳು - ಕಾಲು ಕಪ್ ಉಪ್ಪು - ರುಚಿಗೆ ತಕ್ಕಷ್ಟು ಹಸಿ ಕೊಬ್ಬರಿ ಪೀಸ್ - 2 ಕಪ್ ಸಾಂಬಾರ್ ಈರುಳ್ಳಿ - 10 ಕೊತ್ತಂಬರಿ ಸೊಪ್ಪು - ಒಂದು ಸಣ್ಣ ಕಟ್ ಎಣ್ಣೆ - 6 ಟೀಸ್ಪೂನ್ ಜೀರಿಗೆ -1 ಟೀಸ್ಪೂನ್ ಕಡಲೆಬೇಳೆ - 1 ಟೀಸ್ಪೂನ್ ಒಣ ಮೆಣಸಿನಕಾಯಿ - 4 ಸಾಸಿವೆ - 1 ಟೀಸ್ಪೂನ್ ಉದ್ದಿನ ಬೇಳೆ - 1 ಟೀಸ್ಪೂನ್ ಸಖತ್ ರುಚಿಕರವಾದ ಶೇಂಗಾ ಚಟ್ನಿ ಸಿದ್ಧಪಡಿಸಲು ಮೊದಲಿಗೆ, ರೆಸಿಪಿ ಪ್ರಾರಂಭಿಸಲು ಒಲೆಯನ್ನು ಆನ್ ಮಾಡಿ. ನಾಲ್ಕು ಟೀಸ್ಪೂನ್ ಎಣ್ಣೆಯನ್ನು ಬಾಣಲೆಗೆ ಸುರಿಯಿರಿ. ಎಣ್ಣೆ ಬಿಸಿಯಾದ ಬಳಿಕ, ಎರಡು ಕಪ್ ಕಡಲೆಕಾಯಿಗಳನ್ನು ಸೇರಿಸಿ ಚೆನ್ನಾಗಿ ಹುರಿಯಿರಿ. ಶೇಂಗಾ ಹುರಿದ ಬಳಿಕ ಕೆಲವು ಕರಿಬೇವು ಎಲೆಗಳು, ಹದಿನೈದು ಹಸಿ ಮೆಣಸಿನಕಾಯಿಗಳು ಹಾಗೂ ಕಾಲು ಕಪ್ ಪುದೀನ ಎಲೆಗಳನ್ನು ಸೇರಿಸಿ ಹಾಗೂ ಇವುಗಳನ್ನು ಹುರಿಯಲು ಬಿಡಿ. ಈ ಮಿಶ್ರಣವು ಹುರಿದ ಬಳಿಕ ಒಂದು ಸಣ್ಣ ತುಂಡು ಹುಣಸೆಹಣ್ಣು ಒಂದು ಕಪ್ ಹುರಿದ ಕಡಲೆ (ಪುಟ್ನಾಲು) ಹಾಗೂ ಎರಡು ಕಪ್ ತಾಜಾ ಹಸಿ ಕೊಬ್ಬರಿ ಪೀಸ್‌ಗಳನ್ನು ಸೇರಿಸಿ. ನಂತರ ಒಲೆ ಆಫ್ ಮಾಡಿ ಹಾಗೂ ಮಿಶ್ರಣವನ್ನು ತಣ್ಣಗಾಗಲು ಬಿಡಿ. ಮುಂದೆ, ಈ ಮಿಶ್ರಣವನ್ನು ಬ್ಲೆಂಡರ್ ಜಾರ್‌ಗೆ ವರ್ಗಾಯಿಸಿ. ರುಚಿಗೆ ತಕ್ಕಷ್ಟು ಉಪ್ಪು, 10 ಸಣ್ಣ ಸಾಂಬಾರ್ ಈರುಳ್ಳಿ ಮತ್ತು ಸಾಕಷ್ಟು ನೀರು ಸೇರಿಸಿ. ಬಳಿಕ ಇದನ್ನು ಸ್ವಲ್ಪ ಒರಟಾದ ಪೇಸ್ಟ್ ಆಗಿ ರುಬ್ಬಿಕೊಳ್ಳಬೇಕಾಗುತ್ತದೆ.

ನಿಮ್ಮಲ್ಲಿ ಸಾಂಬಾರ್ ಈರುಳ್ಳಿ ಇಲ್ಲದಿದ್ದರೆ, ಸಾಮಾನ್ಯ ಈರುಳ್ಳಿಯನ್ನು ಬಳಸಬಹುದು. ಚಟ್ನಿ ಒರಟಾದ ಸ್ಥಿರತೆಗೆ ಪುಡಿ ಮಾಡಿದ ಬಳಿಕ, ಸ್ವಲ್ಪ ತಾಜಾ ಕೊತ್ತಂಬರಿ ಸೊಪ್ಪನ್ನು ಸೇರಿಸಿ, ಅಂತಿಮ ಮಿಶ್ರಣವನ್ನು ಚೆನ್ನಾಗಿ ಕಲಿಸಿಕೊಳ್ಳಬೇಕಾಗುತ್ತದೆ. ಬಳಿಕ, ಚಟ್ನಿಯನ್ನು ಸರ್ವಿಂಗ್ ಬೌಲ್‌ಗೆ ವರ್ಗಾಯಿಸಿ. ಬಳಿಕ ನಿಮ್ಮ ಆದ್ಯತೆಗೆ ಸ್ಥಿರತೆಯನ್ನು ಹೊಂದಿಸಲು ಬೆರೆಸಿ ಸಣ್ಣ ಪ್ರಮಾಣದ ನೀರನ್ನು ಕ್ರಮೇಣ ಸೇರಿಸಿ. ಚಟ್ನಿಗಾಗಿ ಒಗ್ಗರಣೆಯನ್ನು ರೆಡಿ ಮಾಡಬೇಕಾಗುತ್ತದೆ, ಒಲೆ ಆನ್ ಮಾಡಿ ಮತ್ತು ಎರಡು ಟೀಸ್ಪೂನ್ ಎಣ್ಣೆಯನ್ನು ಪ್ಯಾನ್‌ಗೆ ಸುರಿಯಿರಿ.

ಎಣ್ಣೆ ಬಿಸಿಯಾದ ಬಳಿಕ ತಲಾ ಒಂದು ಟೀಸ್ಪೂನ್ ಸಾಸಿವೆ, ಕಡಲೆ ಬೇಳೆ, ಉದ್ದಿನ ಬೇಳೆ, ಜೀರಿಗೆ ಸೇರಿಸಿ ಹುರಿಯಲು ಬಿಡಬೇಕಾಗುತ್ತದೆ. ಈ ಮಿಶ್ರಣಕ್ಕೆ ನಾಲ್ಕು ಒಣಗಿದ ಕೆಂಪು ಮೆಣಸಿನಕಾಯಿಗಳು, ಕೆಲವು ಕರಿಬೇವುಗಳನ್ನು ಸೇರಿಸಬೇಕಾಗುತ್ತದೆ.

# ತಂಬಾಕು ಬಳಕೆಯಿಂದ ಪ್ರತಿವರ್ಷ ವಿಶ್ವಾದ್ಯಂತ 80 ಲಕ್ಷಕ್ಕೂ ಹೆಚ್ಚು ಸಾವು

ತಂಬಾಕು ಬಳಕೆ ಮಾಡವುದರಿಂದ ರೋಗಗಳಿಗೆ ಕಾರಣವಾಗುವುದರ ಜೊತೆಗೆ ಸಾವಿಗೂ ಪ್ರಮುಖ ಕಾರಣವಾಗಿದೆ. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ, ತಂಬಾಕು ಬಳಕೆ ಮಾಡುವುದರಿಂದ ಪ್ರತಿವರ್ಷ ವಿಶ್ವಾದ್ಯಂತ ಲಕ್ಷಾಂತರ ಜನರ ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ. ಇದರ ಸೇವನೆಯು ಕ್ಯಾನ್ಸರ್, ಹೃದ್ರೋಗ ಹಾಗೂ ಉಸಿರಾಟದ ಕಾಯಿಲೆಗಳಿಗೆ ಕಾರಣವಾಗುತ್ತದೆ. ಪರಿಣಾಮವಾಗಿ ವಾರ್ಷಿಕವಾಗಿ ಲಕ್ಷಾಂತರ ಸಾವಿನ ಪ್ರಕರಣಗಳು ಸಂಭವಿಸುತ್ತವೆ. ಜಾಗತಿಕವಾಗಿ 1.2 ಶತಕೋಟಿಗೂ ಹೆಚ್ಚು ಜನರು ತಂಬಾಕು ಮತ್ತು ನಿಕೋಟಿನ್ ಉತ್ಪನ್ನಗಳನ್ನು ಬಳಸುತ್ತಾರೆ. ಇದರಲ್ಲಿ ಘಊಔ ಆಗ್ನೇಯ ಏಷ್ಯಾ ಪ್ರದೇಶದ ಸುಮಾರು 322 ಮಿಲಿಯನ್ ವಯಸ್ಕರು ಮತ್ತು 8.6 ಮಿಲಿಯನ್ ಹದಿಹರೆಯದವರು ಸೇರಿದ್ದಾರೆ. ಜೊತೆಗೆ ಹೊಗೆರಹಿತ ತಂಬಾಕನ್ನು ಬಳಸುವ 288 ಮಿಲಿಯನ್ ಜನರು ಇದ್ದಾರೆ. ತಂಬಾಕು ಸೇವನೆಯು ಪ್ರತಿವರ್ಷ ವಿಶ್ವಾದ್ಯಂತ 8 ಮಿಲಿಯನ್‌ಗಿಂತಲೂ ಹೆಚ್ಚು ಸಾವುಗಳಿಗೆ ಕಾರಣವಾಗುತ್ತದೆ. ಭಾರತದಲ್ಲಿ ತಂಬಾಕಿನಿಂದ ಸುಮಾರು 1.35 ಮಿಲಿಯನ್ ಜನ ಸಾವು: ಭಾರತವು ವಿಶ್ವದ ಎರಡನೇ ಅತಿದೊಡ್ಡ ತಂಬಾಕು ಗ್ರಾಹಕ ಮತ್ತು ಉತ್ಪಾದಕ ರಾಷ್ಟ್ರವಾಗಿದೆ. ದೇಶದಲ್ಲಿ ಸುಮಾರು 267 ಮಿಲಿಯನ್ ವಯಸ್ಕರು (15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರು) ತಂಬಾಕು ಬಳಕೆ ಮಾಡುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ಗುಟ್ಕಾ, ಖೈನಿ ಹಾಗೂ ಜರ್ದಾನಂತಹ ಅಗಿಯುವ (ಧೂಮಪಾನ ರಹಿತ) ತಂಬಾಕು ಉತ್ಪನ್ನಗಳನ್ನು ಸೇವಿಸುತ್ತಾರೆ. ಭಾರತದಲ್ಲಿ ತಂಬಾಕು ಸಂಬಂಧಿತ ರೋಗಗಳು ವಾರ್ಷಿಕವಾಗಿ ಸುಮಾರು 1.35 ಮಿಲಿಯನ್ ಜನರು ಸಾವನ್ನಪ್ಪುತ್ತಿದ್ದಾರೆ. ವಿಶ್ವ ತಂಬಾಕು ರಹಿತ ದಿನದ 2026ರ ಥೀಮ್: ಈ ವರ್ಷ ವಿಶ್ವ ತಂಬಾಕು ರಹಿತ ದಿನವನ್ನು 'ಮನವಿಯನ್ನು ಬಹಿರಂಗಪಡಿಸುವುದು- ನಿಕೋಟಿನ್ ಮತ್ತು ತಂಬಾಕು ವ್ಯಸನದ ವಿರುದ್ಧ ಹೋರಾಡುವುದು' ಎಂಬ ವಿಷಯದ ಅಡಿ ಆಚರಿಸಲಾಗುತ್ತಿದೆ. ಈ ಥೀಮ್ ತಂಬಾಕು ಹಾಗೂ ನಿಕೋಟಿನ್ ಉದ್ಯಮಗಳು ತಮ್ಮ ಉತ್ಪನ್ನಗಳನ್ನು ಯುವಜನರನ್ನು ಆಕರ್ಷಿಸುವ ರೀತಿಯಲ್ಲಿ ಹೇಗೆ ವಿನ್ಯಾಸಗೊಳಿಸುತ್ತವೆ ಹಾಗೂ ಮಾರಾಟ ಮಾಡುತ್ತವೆ. ಇದರಿಂದಾಗಿ ಅವರನ್ನು ವ್ಯಸನದ ಚಕ್ರದಲ್ಲಿ ಸಿಲುಕಿಸುತ್ತವೆ ಎಂಬುದನ್ನು ಎತ್ತಿ ತೋರಿಸುತ್ತದೆ. ಈ ವಿಧಾನಗಳನ್ನು ಎತ್ತಿ ತೋರಿಸುವ ಮೂಲಕ ಮತ್ತು ವಿವಿಧ ರಾಷ್ಟ್ರಗಳು ಮತ್ತು ಸಮುದಾಯಗಳಲ್ಲಿ ಸಹಯೋಗದ ಪ್ರಯತ್ನಗಳನ್ನು ಬಲಪಡಿಸುವುದರ ಜೊತೆಗೆ ಸ್ಪಷ್ಟ ಸಂದೇಶವನ್ನು ರವಾನಿಸಲಾಗುತ್ತಿದೆ. ತಂಬಾಕು ಮತ್ತು ನಿಕೋಟಿನ್ ವ್ಯಸನದ ಮುಕ್ತಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಆಗ್ನೇಯ ಏಷ್ಯಾ: ಬಲವಾದ ನೀತಿಗಳು, ಸಾರ್ವಜನಿಕ ಭಾಗವಹಿಸುವಿಕೆಗೆ ಗೆಲವು: ವಿಶ್ವ ಆರೋಗ್ಯ ಸಂಸ್ಥೆಯ (ಘಊಔ) ವರದಿಯ ಪ್ರಕಾರ, ಆಗ್ನೇಯ ಏಷ್ಯಾ ಒಂದು ಕಾಲದಲ್ಲಿ ಜಾಗತಿಕವಾಗಿ ಅತಿ ಹೆಚ್ಚು ತಂಬಾಕು ಬಳಕೆಯನ್ನು ಹೊಂದಿರುವ ಪ್ರದೇಶವಾಗಿತ್ತು. ಬಲವಾದ ನೀತಿಗಳು ಮತ್ತು ಸಕ್ರಿಯ ಸಾರ್ವಜನಿಕ ಭಾಗವಹಿಸುವಿಕೆಯಿಂದ ಈ ಪ್ರದೇಶವು ವಿಶ್ವಾದ್ಯಂತ ತಂಬಾಕು ಸೇವನೆಯಲ್ಲಿ ಗಮನಾರ್ಹ ಕುಸಿತವನ್ನು ಕಂಡಿದೆ.

2000 ಮತ್ತು 2024 ರ ನಡುವೆ, ಪುರುಷರಲ್ಲಿ ತಂಬಾಕು ಬಳಕೆ ಶೇಕಡಾ 70.1 ರಿಂದ 37.4ಕ್ಕೆ ಇಳಿದಿದೆ. ಆದರೆ, ಮಹಿಳೆಯರಲ್ಲಿ ಇದು ಶೇಕಡಾ 38.0 ರಿಂದ 9.3 ಕ್ಕೆ ಇಳಿದಿದೆ.ವಿಶ್ವ ಆರೋಗ್ಯ ಸಂಸ್ಥೆಯ ಮತ್ತೊಂದು ವರದಿಯು ಭಾರತ, ಬಾಂಗ್ಲಾದೇಶ ಮತ್ತು ನೇಪಾಳವು ಕನಿಷ್ಠ ಶೇಕಡಾ 30 ರಷ್ಟು ತಂಬಾಕು ಸೇವನೆಯನ್ನು ಕಡಿಮೆ ಮಾಡುವ ಹಾದಿಯಲ್ಲಿದೆ ಎಂದು ಸೂಚಿಸುತ್ತದೆ.

ಆಗ್ನೇಯ ಏಷ್ಯಾ ಪ್ರದೇಶದ ಈ ಮೂರು ರಾಷ್ಟ್ರಗಳು ಬಲವಾದ ರಾಜಕೀಯ ಬದ್ಧತೆ, ಸಮಗ್ರ ನೀತಿಗಳು ಹಾಗೂ ಸಮುದಾಯದ ಭಾಗವಹಿಸುವಿಕೆಯಿಂದ ನಡೆಸಲ್ಪಡುವ ತಂಬಾಕು ಬಳಕೆಯನ್ನು ನಿಗ್ರಹಿಸುವಲ್ಲಿ ಗಮನಾರ್ಹ ಯಶಸ್ಸನ್ನು ಸಾಧಿಸಿವೆ.

